ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಗೆ ಕೊಟ್ಟಿರುವ ಆದೇಶದ ಬಗ್ಗೆ

604(6470) : ಶ್ರೀ ಎಸ್.ಎ. ರವೀಂದ್ರನಾಥ್ (ಮಾಯಕೊಂಡ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ವ್ಯವಸ್ಥಾಪಕ ನಿರ್ದೇಶಕರಿಗೆ ಕಬ್ಬು ಅಭಿವೃದ್ಧಿ ಆಯುಕ್ತರು ದಿನಾಂಕ 7.12.2004 ರಂದು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ 1959ರ ಕಲಂ 68ರ ಅಡಿಯಲ್ಲಿ ಆದೇಶ ಹೊರಡಿಸಿರುವುದು ನಿಜವೆ?

ಆ) ಹಾಗಿದ್ದಲ್ಲಿ, ಆದೇಶದ ವಿವರವೇ?

ಇ) ಆದೇಶದ ಪ್ರಕಾರ ವ್ಯವಸ್ಥಾಪಕ ನಿರ್ದೇಶಕರು ತೆಗೆದುಕೊಂಡಿರುವ ಕ್ರಮಗಳೇನು ಮತ್ತು ಸರ್ಕಾರಕ್ಕೆ ನೀಡಿರುವ ವರದಿಯ ವಿವರಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು):

ಅ) ಹೌದು.

ಆ) ಆದೇಶ ಸಂಖ್ಯೆ: ಡಿಎಸ್‌ಕೆ:ಇಎಸ್‌ಟಿಎಸ್:32:2000–01 ದಿನಾಂಕ 7.12.2004 ರಂದು ಸಕ್ಕರೆ ನಿರ್ದೇಶಕರು ಕಲಂ 68ರ ಆದೇಶವನ್ನು ಹೊರಡಿಸಿರುತ್ತಾರೆ. ಪ್ರತಿಯನ್ನು ಲಗತ್ತಿಸಿದೆ. ಸದರಿ ಆದೇಶದಲ್ಲಿ 7 ನ್ಯೂನತೆಗಳ ಬಗ್ಗೆ ಕ್ರಮ ತೆಗೆದುಕೊಳ್ಳಲು ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚನೆ ನೀಡಲಾಗಿತ್ತು. ಕಲಂ 68ರ ಆದೇಶಕ್ಕೆ ವ್ಯವಸ್ಥಾಪಕ ನಿರ್ದೇಶಕರು ಅನುಪಾಲನ ವರದಿಯನ್ನು ದಿನಾಂಕ 6.12.1005 ರಂದು ಸಲ್ಲಿಸಿರುತ್ತಾರೆ. ಪ್ರತಿಯನ್ನು ಲಗತ್ತಿಸಿದೆ. ಅನುಪಾಲನಾ ವರದಿಯನ್ನು ಪರಿಶೀಲಿಸಿದ್ದು 2 ಆರೋಪಗಳಿಗೆ ಸಂಬಂಧಪಟ್ಟಂತೆ ಉಳಿದ 5 ನ್ಯೂನತೆಗಳನ್ನು ಈ ಕಛೇರಿಯ ನಿರ್ದೇಶನದ ಪ್ರಕಾರ ಕ್ರಮ ಕೈಗೊಳ್ಳಲು ಕಾರ್ಖಾನೆಗೆ ತಿಳಿಸಲಾಗಿದೆ.

ಕರ್ನಾಟಕ ಸರ್ಕಾರ

(ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯ)

ನಂ:32, ಚೌಗಲೇ ಹೌಸ್,
ಕ್ರಸೆಂಟ್ ರಸ್ತೆ,

ನಂ:ಡಿಎಸ್‌ಕೆ:ಇಎಸ್‌ಟಿಎಸ್: 32: 2000–01 ಬೆಂಗಳೂರು, ದಿನಾಂಕ 7–12–2004.

ವಿಷಯ: ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ), ದೊಡ್ಡಬಾತಿ, ದಾವಣಗೆರೆ ಜಿಲ್ಲೆ ಇದರ ಆಡಳಿತ ವ್ಯವಸ್ಥೆ ಹಾಗೂ ಆರ್ಥಿಕ ಸ್ಥಿತಿಯ ಬಗ್ಗೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 64ರ ಅಡಿ ವಿಚಾರಣಾ ವರದಿಯ ಮೇಲೆ ಕಾಯ್ದೆ ಕಲಂ 68ರ ಅಡಿ ಆದೇಶ ಹೊರಡಿಸುವ ಕುರಿತು.

ಉಲ್ಲೇಖ: ಈ ಕಛೇರಿಯ ಆದೇಶ ಕ್ರ:ಡಿಎಸ್‌ಕೆ: ಇಎಸ್‌ಟಿಎಸ್: 23: 2000–01 ದಿನಾಂಕ 23–12–2003.

2. ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ್ಯ ಇವರ ಅ.ಸ. ಪತ್ರ ಕ್ರ.ಡೆಆರ್ ಬಿ: ಕಲಂ 64 ವಿಚಾರಣೆ: 01: 2003–04 ದಿನಾಂಕ 26–10–2004.

ಪ್ರಸ್ತಾವನೆ:

ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ), ದೊಡ್ಡಬಾತಿ, ದಾವಣಗೆರೆ ಜಿಲ್ಲೆ ಇದರ ಆಡಳಿತ ಮಂಡಳಿಯು ಕಾರ್ಖಾನೆಯ ವ್ಯವಹಾರಗಳನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಮತ್ತು ಕಾನೂನು ಹಾಗೂ ಕಾರ್ಖಾನೆಯ ಉಪ ನಿಯಮಗಳಾನುಸಾರ ಕಾರ್ಯನಿರ್ವಹಿಸುವಲ್ಲಿ ವಿಫಲವಾಗಿ ಕಾರ್ಖಾನೆಯು ಹೆಚ್ಚಿನ ಆರ್ಥಿಕ ಹಾನಿ ಅನುಭವಿಸಿ, ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವುದು ವರದಿಯಾಗಿದ್ದರಿಂದ, ಕಾರ್ಖಾನೆಯ ವ್ಯವಹಾರಗಳ ಕುರಿತು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 64 ರಡಿ ವಿಚಾರಣೆಗೆ ಉಲ್ಲೇಖ (1) ರಲ್ಲಿಯ ಆದೇಶದನ್ವಯ ಆದೇಶಿಸಿ, ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಲಾಗಿತ್ತು. ಅದರಂತೆ, ವಿಚಾರಣಾಧಿಕಾರಿಗಳು ವಿಚಾರಣೆಯನ್ನು ಪೂರ್ಣಗೊಳಿಸಿ, ಉಲ್ಲೇಖ (2) ರನ್ವಯ, ವರದಿಯನ್ನು ಸಲ್ಲಿಸಿರುತ್ತಾರೆ.

ವಿಚಾರಣಾ ವರದಿಯನ್ನು ಪರಿಶೀಲಿಸಲಾಗಿದೆ. ವಿಚಾರಣೆಗೆ ವಹಿಸಿರುವ 12 ಆರೋಪಗಳಲ್ಲಿ ಆರೋಪ ಕ್ರ.ಸಂ: 3,5,6,7,8,9 ಮತ್ತು 12 ಇವುಗಳು ಸಾಬೀತಾಗಿವೆ. ಈ ಅಂಶಗಳ ಮೇಲೆ ಅನುಸರಣಾ ಕ್ರಮ ಕೈಗೊಳ್ಳುವುದು ಅವಶ್ಯಕವಾಗಿದೆ. ಆದುದರಿಂದ ಈ ಕೆಳಗಿನ ಆದೇಶ ಹೊರಡಿಸಿದೆ.

"ಆದೇಶ"

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 68(1) ಅಡಿ ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ:69.ಸಿಎಲ್ಎಮ್:2001 ದಿನಾಂಕ 21–11–2001 ರ ಪ್ರಕಾರ ದತ್ತವಾದ ಅಧಿಕಾರವನ್ನು ಚಲಾಯಿಸಿ ಬಿ.ಹೆಚ್. ಮಂಜುನಾಥ್, ಭಾ.ಆ.ಸೇ, ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು ಆದ ನಾನು ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ), ದೊಡ್ಡಬಾತಿ, ದಾವಣಗೆರೆ ಜಿಲ್ಲೆ ಇದರ ಉಲ್ಲೇಖ (2)ರ ರೀತ್ಯಾ ಸಲ್ಲಿಸಲ್ಪಟ್ಟ ಕಾಯ್ದೆ ಕಲಂ 64ರ ವಿಚಾರಣಾ ವರದಿ ರೀತ್ಯಾ ಸಾಬೀತಾದ ಆರೋಪಗಳ ಬಗ್ಗೆ ಈ ಕೆಳಕಾಣಿಸಿದಂತೆ ಅನುಪಾಲನಾ ಕ್ರಮ ತೆಗೆದುಕೊಳ್ಳಲು ಆದೇಶಿಸಿರುತ್ತೇನೆ.

1. ಆರೋಪ–3

ಕಾರ್ಖಾನೆಯ ಆಡಳಿತ ಮಂಡಳಿ ಸದಸ್ಯರು ಆದ ಶ್ರೀ ಬಿ.ಟಿ. ಸತ್ಯನಾರಾಯಣ ಇವರು ಕಾರ್ಖಾನೆಗೆ ಸದಸ್ಯತ್ವ ಕೋರಿ ದಿನಾಂಕ 27.2.2002 ರಂದು ಕಾರ್ಖಾನೆಯ ಸದಸ್ಯತ್ವಕ್ಕೆ ಅರ್ಜಿಸಲ್ಲಿಸಿದ್ದು ಸದರಿಯವರನ್ನು ಮರುದಿನವೇ ಅಂದರೆ 28.2.2002 ರಂದು ಕಾರ್ಖಾನೆಯ ಆಡಳಿತ ಮಂಡಳಿ ಸಭೆಯಲ್ಲಿ ಹೆಚ್ಚುವರಿ ವಿಷಯವಾಗಿ ಇಟ್ಟುಕೊಂಡು ಸದರಿಯವರಿಗೆ ಸದಸ್ಯತ್ವ ನೀಡಿ ಅದೇ ದಿನದಂದು ಇವರನ್ನು ಆಡಳಿತ ಮಂಡಳಿ ಸದಸ್ಯರನ್ನಾಗಿ ಕೋ ಆಪ್ಟ್ ಮಾಡಿಕೊಂಡಿರುವುದು. ವಿಚಾರಣಾ ವರದಿಯಿಂದ ತಿಳಿದುಬಂದಿದೆ. ಕಾರ್ಖಾನೆಯ ಉಪನಿಯಮ ಕ್ರಮ ಸಂಖ್ಯೆ 21(4) ರ ಪ್ರಕಾರ ಇವರನ್ನು ಕೋ ಆಪ್ಟ್ ಮಾಡಿಕೊಂಡಿದ್ದರೂ ಸಹ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 20(2) ಎ(III) ರ ಅವಕಾಶದಂತೆ ಯಾವುದೇ ಸದಸ್ಯರು ಸಭೆಗಳಲ್ಲಿ ಮತ ಚಲಾಯಿಸಲು

ತಾನು ಮತ ಚಲಾಯಿಸುವ ದಿನದಿಂದ 12 ತಿಂಗಳು ಮುಂಚಿತವಾಗಿ ಸದರಿ ಸಂಸ್ಥೆಗೆ ಸದಸ್ಯನಾಗಬೇಕಾಗಿರುತ್ತದೆ. ಅಲ್ಲದೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 29(ಸಿ)(2)(ಹೆಚ್) ಪ್ರಕಾರ ಆಡಳಿತ ಮಂಡಳಿ ಸದಸ್ಯನು ಕಲಂ 20(2) ರ ಪ್ರಕಾರ ಮತ ಚಲಾಯಿಸುವ ಅರ್ಹತೆ ಹೊಂದಿಲ್ಲದೆ ಇದ್ದಲ್ಲಿ ಸದರಿ ಸಂಸ್ಥೆಯು ಆಡಳಿತ ಮಂಡಳಿ ಸದಸ್ಯನಾಗಲು ಅನರ್ಹರಾಗಿರುತ್ತಾನೆ. ಈ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳದೇ ಶ್ರೀ ಬಿ.ಟಿ. ಸತ್ಯನಾರಾಯಣ ಇವರನ್ನು ಒಂದೇ ದಿನದಲ್ಲಿ ಎ ತರಗತಿ ಸದಸ್ಯರನ್ನಾಗಿ ಹೆಚ್ಚುವರಿ ವಿಷಯದಡಿಯಲ್ಲಿ ಮಾಡಿಕೊಂಡು ಅದೇ ದಿನ ಆಡಳಿತ ಮಂಡಳಿ ಸದಸ್ಯಕ್ಕೂ ರೆಗ್ಯುಲರ್ ವಿಷಯದ ಸಂಖ್ಯೆ 7 ರಲ್ಲಿ ಕೋ ಆಪ್ಟ್ ಮಾಡಿಕೊಂಡಿರುವುದು ವಿಚಾರಣಾ ವರದಿಯಿಂದ ಸ್ಪಷ್ಟವಾಗಿದೆ. ಆದ್ದರಿಂದ ಸದರಿಯವರು ಈ ಕಾರ್ಖಾನೆಯ ಆಡಳಿತ ಮಂಡಳಿ ಸದಸ್ಯರಾಗಿ ಆಯ್ಕೆಯಾಗಲು ಅನರ್ಹರಾಗಿರುವುದರಿಂದ ಆಡಳಿತ ಮಂಡಳಿಯಲ್ಲಿ ಮುಂದುವರಿಯಲು ಅವಕಾಶವಿರುವುದಿಲ್ಲ ಹಾಗೂ ಈ ಕ್ರಮ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 29(ಸಿ)(1)(ಹೆಚ್)ಗೆ ವಿರುದ್ಧವಾಗಿರುತ್ತದೆ. ಆದ್ದರಿಂದ ಅವರನ್ನು ಅನರ್ಹಗೊಳಿಸಲು ಸಕ್ಷಮ ಪ್ರಾಧಿಕಾರಕ್ಕೆ ಮನವಿ ಮಾಡತಕ್ಕದ್ದು.

2. ಆರೋಪ –5

ಕಾರ್ಖಾನೆಯು 2002–03ನೇ ಸಾಲಿನಲ್ಲಿ ಸಭೆಯ ಟರ್‌ಬೈನ್ ರಿಪೇರಿ ಮಾಡಿಸಿ ಮೆ. ರಾಮ್ ಟರ್ಬೊ ಇಂಜಿನಿಯರಿಂಗ್ ವರ್ಕ್ಸ್ ಇವರಿಗೆ ಟೆಂಡರ್ ಕರೆದು ನಮೂದಿಸಿದ ಮೊತ್ತಕ್ಕೆ ರೂ. 1.50 ಲಕ್ಷಗಳಿಗೆ ರಿಪೇರಿ ಮಾಡಿಸಿ ಈ ಸಂಸ್ಥೆಯು 2 ವರ್ಷಗಳ ಗ್ಯಾರಂಟಿ ಸರ್ಟಿಫಿಕೇಟ್ ನೀಡಿದ್ದರೂ ಸಹ 2003–04ನೇ ಸಾಲಿನ ಹಂಗಾಮು ಪ್ರಾರಂಭಿಸಿದ ಕೆಲವೇ ದಿನಗಳಲ್ಲಿ ಟರ್‌ಬೈನ್ ಅತಿಹೆಚ್ಚಿನ ದುರಸ್ತಿಗೆ ಬಂದಿದ್ದು ಶ್ರೀ ರಾಮ್ ಕಂಪನಿಯು ನೀಡಿರುವ ಗ್ಯಾರಂಟಿಯ ಅವಧಿಯನ್ನು ಉಪಯೋಗಿಸಿಕೊಳ್ಳದೇ ಇದೇ ಸಂಸ್ಥೆಗೆ ರೂ. 8.50 ಲಕ್ಷ ಅಂದಾಜು ವೆಚ್ಚಕ್ಕೆ ಟರ್‌ಬೈನ್ ರಿಪೇರಿ ಕೆಲಸ ಮಾಡಿಸಿರುತ್ತಾರೆ ಗ್ಯಾರಂಟಿ ಅವಧಿಯಲ್ಲಿಯೇ ಪುನಃ ರೂ. 8.50 ಲಕ್ಷ ರಿಪೇರಿ ಖರ್ಚು ಮಾಡಿರುವುದು ವಿಚಾರಣಾ ವರದಿಯಿಂದ ಸ್ಪಷ್ಟವಾಗಿದೆ. ಸರ್ಕಾರವು ಹೊಸ ಟರ್‌ಬೈನ್ ಖರೀದಿಸಲು ಅನುಮತಿ ನೀಡಿದ್ದರೂ ಸಹ ಕಾರ್ಖಾನೆಯು ಹಳೆಯ ಟರ್‌ಬೈನ್ ಅವಲಂಬಿಸಿಕೊಂಡು 2003–04 ನೇ ಸಾಲಿನ ಹಂಗಾಮು ಸಂಪೂರ್ಣವಾಗಿ ಸ್ಥಗಿತಗೊಳಿಸಿ ಕಾರ್ಖಾನೆಗೆ ಹೆಚ್ಚಿನ ಆರ್ಥಿಕ ಹಾನಿ ಉಂಟಾಗಿದ್ದರಿಂದ ಇದಕ್ಕೆ ಆಡಳಿತ ಮಂಡಳಿಯವರು ಜವಾಬ್ದಾರರಾಗಿರುತ್ತಾರೆ. ಹಾಗೂ ಗ್ಯಾರಂಟಿಯ ಅವಧಿಯಲ್ಲಿ ಪುನಃ ರಿಪೇರಿಗೆ ಖರ್ಚು ಮಾಡಿರುವ ರೂ. 8.50 ಲಕ್ಷಗಳನ್ನು ಕಾರ್ಖಾನೆಯ ಆಡಳಿತ ಮಂಡಳಿ ಸದಸ್ಯರಿಂದ ವಸೂಲಾತಿಗೆ ಸಹಕಾರ ಸಂಘಗಳ ಕಾಯ್ದೆ ಕಲಂ 69:70 ಮತ್ತು 103(1)ರ ಅಡಿಯಲ್ಲಿ ಕಾನೂನು ಕ್ರಮ ಜರುಗಿಸತಕ್ಕದ್ದು.

3. ಆರೋಪ –6

ಕಬ್ಬು ಬೆಳೆದ ರೈತರಿಗೆ ಅನಾನುಕೂಲ ಉಂಟಾಗಿರುವ ಅಂಶವು ಸಾಭೀತಾಗಿರುವುದಾಗಿ ಹಾಗೂ ಈ ತೊಂದರೆಗೆ ಯಂತ್ರೋಪಕರಣಗಳ ವೈಫಲ್ಯ ಪ್ರಮುಖ ಕಾರಣ ಎಂಬುದಾಗಿ ಕಂಡು ಬರುತ್ತದೆ. ಎಂದು ಅಲ್ಲದೆ ರೈತರಿಗೆ ಉಂಟಾದ ತೊಂದರೆಯನ್ನು ನಿವಾರಿಸಲು ಕಾರ್ಖಾನೆಯು ಕಬ್ಬನ್ನು ಬೇರೆ ಕಾರ್ಖಾನೆಗೆ ಸಾಗಾಣಿಕೆ ಮಾಡಲು ಕಾರ್ಖಾನೆಯು ಕ್ರಮ ತೆಗೆದುಕೊಂಡಿರುವುದಾಗಿ

ದಿನಾಂಕ 10–10–2003 ರಂದು ಕಾರ್ಖಾನೆಯ ಟರ್‌ಬೈನ್‌ನಲ್ಲಿ ಅತಿಹೆಚ್ಚಿನ ದುರಸ್ತಿ ಕಂಡುಬಂದಿದ್ದರಿಂದ ಕಬ್ಬು ಅರೆಯುವಿಕೆಯನ್ನು ತಕ್ಷಣದಿಂದಾಗಿ ಅನಿವಾರ್ಯವಾಗಿ ಸಲ್ಲಿಸಲಾಗಿದೆ ಎಂದು ವಿಚಾರಣಾಧಿಕಾರಿಗಳು ಅಭಿಪ್ರಾಯ ಪಟ್ಟಿದ್ದಾರೆ. ಹೊಸ ಟರ್‌ಬೈನ್ ಅಳವಡಿಸಿ 2003–04 ಹಂಗಾಮು ಸುವ್ಯವಸ್ಥೆಯಲ್ಲಿ, ನಡೆಸುವಲ್ಲಿ ಕಾರ್ಖಾನೆಯು ಆಡಳಿತ ಮಂಡಳಿಯು ವೈಫಲ್ಯವಾಗಿದ್ದರಿಂದ ಈ ಬಗ್ಗೆ ಆಡಳಿತ ಮಂಡಳಿ ಸದಸ್ಯರುಗಳು ಜವಾಬ್ದಾರರಾಗಿರುತ್ತಾರೆ.

4. ಆರೋಪ –7

ಕಾರ್ಖಾನೆಯು ಕಬ್ಬು ನಿಯಂತ್ರಣ ಕಾಯ್ದೆ 1966ರ ಅವಕಾಶದಂತೆ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ನಿಗದಿಪಡಿಸಿದ ಶಾಸನಬದ್ಧ ಕಬ್ಬಿನ ಬಿಲ್ಲು ಬಾಕಿ ರೂ. 164.73 ಲಕ್ಷ ಸೇರಿದಂತೆ ಒಟ್ಟು ರೂ. 355.99 ಲಕ್ಷಗಳನ್ನು ನಿಗದಿ ಅವಧಿಯಲ್ಲಿ ಅಂದರೆ ಕಬ್ಬು ಸರಬರಾಜು ಮಾಡಿದ 14 ದಿನಗಳ ಒಳಗೆ ಕಾರ್ಖಾನೆಯು ಪಾವತಿಸಿಲ್ಲದಿರುವುದು ಮತ್ತು ಈ ಬಾಕಿ 2001–02 ರಿಂದ 2003–04ರವರೆಗಿನ ಸಾಲುಗಳಿಗೆ ಸಂಬಂಧಿಸಿರುವುದು ವಿಚಾರಣಾ ವರದಿಯಿಂದ ಸ್ಪಷ್ಟವಾಗಿದೆ.

ಕಾರ್ಖಾನೆಯ ಆಡಳಿತ ಮಂಡಳಿಯು ಕಾರ್ಖಾನೆಯ ಹಂಗಾಮಿಗೆ ಮುಂಚೆ ಹಣದ ಪಾವತಿಗೆ ಬೇಕಾದ ಸಿದ್ಧತೆ ಮಾಡಿಕೊಳ್ಳುವುದರಲ್ಲಿ ವಿಫಲವಾಗಿ ಕಬ್ಬು ಸರಬರಾಜು ಮಾಡಿದ ರೈತರಿಗೆ ಪಾವತಿಸಬೇಕಾದ ಒಟ್ಟು ರೂ. 355.99 ಲಕ್ಷ ರೂ.ಗಳನ್ನು ಪಾವತಿಸುವಲ್ಲಿ ಕಾರ್ಖಾನೆಯು ಸುಸ್ತಿಯಾಗಿದ್ದು, ಕಬ್ಬು (ನಿಯಂತ್ರಣ) ಕಾಯ್ದೆ 1966 ನ್ನು ಉಲ್ಲಂಘನೆ ಮಾಡಿದ್ದರಿಂದ ಕಾರ್ಖಾನೆಯ ಆಡಳಿತ ಮಂಡಳಿ ಸದಸ್ಯರನ್ನು ಜವಾಬ್ದಾರರನ್ನಾಗಿ ಮಾಡಲಾಗಿದೆ.

5. ಆರೋಪ –8

ಕಾರ್ಖಾನೆಯ ಟರ್‌ಬೈನ್ ರಿಪೇರಿಗೆ ಬಂದು, 2003–04ನೇ ಕಬ್ಬು ಸುರಿಸುವಿಕೆ ಹಂಗಾಮು ಸ್ಥಗಿತಗೊಂಡು ಕಟಾವು ಆದ ಕಬ್ಬು ಹಾಗೆಯೇ ಉಳಿದು ಅದನ್ನು ದಾವಣಗೆರೆ ಸಕ್ಕರೆ ಕಾರ್ಖಾನೆಗೆ ರವಾನಿಸಿರುವುದು ಮತ್ತು ಈ ಬಗ್ಗೆ ಸಕ್ಷಮ ಪ್ರಾಧಿಕಾರದ ಪೂರ್ವ ಅನುಮತಿ ಪಡೆಯದೇ ರವಾನಿಸಿರುವುದು ವಿಚಾರಣಾ ವರದಿಯಿಂದ ಸ್ಪಷ್ಟವಾಗುತ್ತದೆ. ಇದು ಕಬ್ಬು (ನಿಯಂತ್ರಣ) ಕಾಯ್ದೆ 1966ರ ಮತ್ತು ಅಗತ್ಯ ವಸ್ತುಗಳ ಕಾಯ್ದೆಗಳ ಸ್ಪಷ್ಟ ಉಲ್ಲಂಘನೆಯಾಗಿರುವುದರಿಂದ ಇದಕ್ಕೆ ಆಡಳಿತ ಮಂಡಳಿಯು ಜವಾಬ್ದಾರರಾಗಿರುತ್ತಾರೆ.

6. ಆರೋಪ–9

ಕಾರ್ಖಾನೆಯು 2002–03ನೇ ಲೆಕ್ಕ ಪರಿಶೋಧನೆಯ ಪ್ರಕಾರ 31–3–2003ಕ್ಕೆ ಬಳಕೆಯಾಗದೇ ಕ್ಷೇತ್ರಾಭಿವೃದ್ಧಿ ನಿಧಿ ರೂ. 2,56,51,693.66 ಇದ್ದು ಇದನ್ನು ಬ್ಯಾಂಕಿನಲ್ಲಿ ಪ್ರತ್ಯೇಕವಾಗಿ ಠೇವಣಿ ಮಾಡಿರುವುದಿಲ್ಲ. ಇದರಲ್ಲಿ ರೂ. 1,86,90,137.80 ಎನ್‌ಆರ್‌ಡಿ ಹಣ ಈ ನಿಧಿಗೆ ವರ್ಗಾಯಿಸಿರುವುದು ಒಳಗೊಂಡಿರುತ್ತದೆ. ಈ ನಿಧಿ ಬೈಲಾ ನಿಯಮದ ಅನುಸಾರ ನಿರ್ದಿಷ್ಟ ಉದ್ದೇಶಕ್ಕಾಗಿ ಬಳಕೆಯಾಗದೇ ಕಾರ್ಖಾನೆಯ ವ್ಯವಹಾರದಲ್ಲಿ ಬಳಸಿಕೊಂಡಿರುವುದು ವಿಚಾರಣಾ ವರದಿಯಿಂದ ಸ್ಪಷ್ಟವಾಗುತ್ತದೆ. ಇದು ಸಂಬಂಧಪಟ್ಟ ಕಾರ್ಖಾನೆಯ ಆಡಳಿತ ಮಂಡಳಿಯ ವೈಫಲ್ಯವಾಗಿರುವುದು ಮತ್ತು ಇದಕ್ಕೆ ಆಡಳಿಯ ಮಂಡಳಿಯ ಸದಸ್ಯರು, ಜವಾಬ್ದಾರರಾಗಿರುತ್ತಾರೆ.

7. ಆರೋಪ –12

ಕಾರ್ಖಾನೆಯು 2002–03ನೇ ಸಾಲಿನಲ್ಲಿ ಅಳವಡಿಸಿರುವ ಇಂಜೆಕ್ಷನ್ ಪೈಪ್ ಲೈನ್‌ಗಳು ಕಳಪೆ ಮಟ್ಟದಾಗಿದ್ದು, ಈ ಪೈಪುಗಳು ರಾಸಾಯನಿಕ ಕ್ರಿಯೆಗೆ ಒಳಗಾಗಿ ಈ ಪೈಪುಗಳು ಕೆಲವೇ ದಿನಗಳ ಅಂತರದಲ್ಲಿ ಹಾಳಾಗಿದ್ದು ಇದಕ್ಕೆ ಚೀಪ್‌ಕೆಮಿಷ್ಟು, ಡೆಪ್ಯೂಟಿ ಚೀಪ್‌ಕೆಮಿಷ್ಟು ಮತ್ತು ನಾಲ್ಕು ಜನ ಮ್ಯಾನುಫ್ಯಾಚರಿಂಗ್ ಕೆಮಿಷ್ಟುಗಳು ಜವಾಬ್ದಾರರಾಗಿರುತ್ತಾರೆ. ಎಂದು ಈ ಪೈಪುಗಳನ್ನು ಅಳವಡಿಸಲು ರೂ. 7,26,912.00 ಖರ್ಚು ಮಾಡಿರುವುದಾಗಿ ವಿಚಾರಣಾ ವರದಿಯಿಂದ ಸ್ಪಷ್ಟವಾಗಿದೆ. ಈ ನಷ್ಟದ ಮೊತ್ತವನ್ನು ಸಂಬಂಧಿಸಿದವರಿಂದ ವಸೂಲಾತಿಗೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 69:70 ಮತ್ತು 103 ರಡಿಯಲ್ಲಿ ವಸೂಲಾತಿ ಮಾಡಿಕೊಳ್ಳಲು ಕಾನೂನು ಕ್ರಮ ವಹಿಸತಕ್ಕದ್ದು. ಅಲ್ಲದೆ ಇಂತಹ ಪ್ರಮುಖ ಸಂದರ್ಭದಲ್ಲಿ ಸಕಾಲದಲ್ಲಿ ಸ್ಪಂದಿಸಿ ಸೂಕ್ತ ಗಮನ ನೀಡದೇ ಇರುವುದು ಆಡಳಿತ ಮಂಡಳಿಯ ವೈಫಲ್ಯವಾಗಿದೆ.

ಕಾರ್ಖಾನೆಯ ಆಡಳಿತ ಮಂಡಳಿಯು ಮೇಲೆ ತಿಳಿಸಿದ ಆರೋಪಗಳ ಬಗ್ಗೆ ಸಂಬಂಧಪಟ್ಟವರ ಬಗ್ಗೆ ಮೇಲೆ ತಿಳಿಸಿರುವಂತೆ ಸೂಕ್ತ ಕಾನೂನು ಕ್ರಮ ತೆಗೆದುಕೊಂಡ ಅನುಪಾಲನಾ ವರದಿಯನ್ನು ಈ ಆದೇಶ ತಲುಪಿದ 30 ದಿನಗಳೊಳಗೆ ಈ ಕಛೇರಿಗೆ ಸಲ್ಲಿಸತಕ್ಕದ್ದು.

ಉಲ್ಲೇಖ (2)ರ ಪತ್ರದ ಮೂಲಕ ಸ್ವೀಕೃತವಾದ ಕಲಂ 64 ರಡಿ ವಿಚಾರಣಾ ಮೂಲ ವರದಿ ಪ್ರತಿಯನ್ನು ಮಾಹಿತಿಗಾಗಿ ಹಾಗೂ ಮೇಲಿನಂತೆ ಕ್ರಮ ಜರುಗಿಸಲು ಅನುಕೂಲವಾಗುವಂತೆ ಲಗತ್ತಿಸಿ ಕಳುಹಿಸಿದೆ.

ಮೇಲಿನ ಆದೇಶವು ನನ್ನ ಹಸ್ತಾಕ್ಷರ ಮತ್ತು ಕಛೇರಿ ಮುದ್ರೆಯೊಂದಿಗೆ 2004 ರ ಡಿಸೆಂಬರ್ 7 ರಂದು ಕೊಡಲ್ಪಟ್ಟಿದೆ.

ಸಹಿ

(ಬಿ.ಹೆಚ್. ಮಂಜುನಾಥ್)

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ
ಸಕ್ಕರೆ ನಿರ್ದೇಶಕರು.

ಭದ್ರಾ ಸಹಕಾರ ಸಕ್ಕರೆ ಕಾರ್ಖಾನೆ ನಿಯಮಿತ,
ದೊಡ್ಡಬಾತಿ,–577566, ದಾವಣಗೆರೆ ಜಿಲ್ಲೆ, ಕರ್ನಾಟಕ ರಾಜ್ಯ

ಸಂಖ್ಯೆ: ಬಿಎಸ್ ಎಸ್ ಕೆ: ಆಡಳಿತ:2577:2004–05 ದಿನಾಂಕ: 6–1–05

ಗೆ,

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ
ಸಕ್ಕರೆ ನಿರ್ದೇಶಕರು, ನಂ. 32,
ಚೌಗುಲೇ ಹೌಸ್, 6ನೇ ಮಹಡಿ,
ಕ್ರೆಸೆಂಟ್ ರಸ್ತೆ, ಬೆಂಗಳೂರು–1.

ಮಾನ್ಯರೆ,

ವಿಷಯ: ಭದ್ರಾ ಸಹಕಾರ ಸಕ್ಕರೆ ಕಾರ್ಖಾನೆ(ನಿ), ದೊಡ್ಡಬಾತಿ, ದಾವಣಗೆರೆ ಜಿಲ್ಲೆ ಇದರ ಆಡಳಿತ ಮಂಡಳಿ ವ್ಯವಸ್ಥೆ ಹಾಗೂ ಆರ್ಥಿಕ ಸ್ಥಿತಿಯ ಬಗ್ಗೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 64ರಡಿ ವಿಚಾರಣಾ ವರದಿಯ ಮೇಲೆ ಕಾಯ್ದೆ ಕಲಂ 68ರಡಿಯಲ್ಲಿ ನೀಡಿರುವ ಆದೇಶದ ಅನುಸರಣಾ ವರದಿ ಕುರಿತು.

ಉಲ್ಲೇಖ: 1) ಕಛೇರಿ ಆದೇಶ ಸಂಖ್ಯೆ 23: ಡಿಎಸ್‌ಕೆ:ಇಎಸ್‌ಟಿಎಸ್: 2000–01 ದಿ: 23–12–2003.

2) ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ ಇವರ ಅ.ನಿ.ರ.ಕ್ರ.ಸಂ. ಜಿಆರ್‌ಬಿ–ಕಲಂ 64ರ ವಿಚಾರಣೆ–1–2003–04 ದಿನಾಂಕ: 26–10–04

3) ನಿರ್ದೇಶಕರು, ವಿಚಾರಣಾಧಿಕಾರಿಯವರ ಮುಂದೆ ಸಲ್ಲಿಸಿರುವ ಲಿಖಿತ ಹೇಳಿಕೆ ದಿನಾಂಕ 20–5–04

4) ಆದೇಶ ಸಂ. ಡಿಎಸ್‌ಕೆ : ಇಎಸ್‌ಟಿಎಸ್ :32:2000–01 ದಿನಾಂಕ: 7.2.04

5) ಆಡಳಿತ ಮಂಡಳಿಯ ತೀರ್ಮಾನ ದಿನಾಂಕ: 22–12–04

ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ದೊಡ್ಡಬಾತಿ ಇದರ ಆಡಳಿತ ಮಂಡಳಿಯು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಮತ್ತು ಕಾನೂನು ಹಾಗೂ ಕಾರ್ಖಾನೆಯ ಉಪ ನಿಯಮಗಳ ಅನುಸಾರ ಕಾರ್ಯ ನಿರ್ವಹಿಸುವಲ್ಲಿ ವಿಫಲವಾಗಿರುವ ಬಗ್ಗೆ/ದೂರಿನನ್ವಯ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 64ರಡಿಯಲ್ಲಿ ನೀಡಿರುವ ವಿಚಾರಣಾ ವರದಿಯನ್ನು ಉಲ್ಲೇಖಿಸಿ ಕಾಯ್ದೆ ಕಲಂ 68ರಡಿಯಲ್ಲಿ ಅನುಪಾಲನಾ ಕ್ರಮ ಜರುಗಿಸಲು ಉಲ್ಲೇಖ (4) ರಲ್ಲಿ ಆದೇಶ ನೀಡಿರುವ ಮೇರೆಗೆ ದಿನಾಂಕ 22–12–2004ರಂದು ನಡೆದ ಆಡಳಿತ ಮಂಡಳಿಯ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಿ ಆಡಳಿತ ಮಂಡಳಿಯು ತೆಗೆದುಕೊಂಡ ಸರ್ವಾನುಮತದ ತೀರ್ಮಾನದನ್ವಯ ಆರೋಪ ಒಂದರಿಂದ ಏಳರವರೆಗೆ ವಿವರವಾದ ಅನುಸರಣಾ ವರದಿಯನ್ನು ಹಾಗೂ ತೆಗೆದುಕೊಂಡಿರುವ ಕ್ರಮವನ್ನು ಈ ಕೆಳಗಿನಂತೆ ಸಲ್ಲಿಸಲಾಗಿದೆ.

1. "ಆರೋಪ–3"

ಕಾರ್ಖಾನೆಯ ಆಡಳಿತ ಮಂಡಳಿ ಸದಸ್ಯರಾದ ಶ್ರೀ ಸತ್ಯನಾರಾಯಣ ಇವರು ಕಾರ್ಖಾನೆಗೆ ಸದಸ್ಯತ್ವ ಕೋರಿ ದಿನಾಂಕ 27–2–2002 ರಂದು ಕಾರ್ಖಾನೆಯ ಸದಸ್ಯತ್ವಕ್ಕೆ ಅರ್ಜಿ ಸಲ್ಲಿಸಿದ್ದು ಸದರಿಯವರನ್ನು ಮರುದಿನವೇ ಅಂದರೆ 28–2–2002 ರಂದು ಕಾರ್ಖಾನೆಯ ಆಡಳಿತ ಮಂಡಳಿ ಸಭೆಯಲ್ಲಿ ಹೆಚ್ಚುವರಿ ವಿಷಯವಾಗಿ ಇಟ್ಟುಕೊಂಡು ಸದರಿಯವರಿಗೆ ಸದಸ್ಯತ್ವ ನೀಡಿ, ಅದೇ ದಿನದಂದು ಇವರನ್ನು ಆಡಳಿತ ಮಂಡಳಿಯ ಸದಸ್ಯರನ್ನಾಗಿ ಕೋ–ಆಪ್ ಮಾಡಿಕೊಂಡಿರುವುದು ವಿಚಾರಣಾ ವರದಿಯಿಂದ ತಿಳಿದು ಬಂದಿದೆ. ಕಾರ್ಖಾನೆಯ ಉಪ ನಿಯಮ ಕ್ರಮ ಸಂಖ್ಯೆ

21(4)ರ ಪ್ರಕಾರ ಇವರನ್ನು ಕೋ–ಆಫ್ ಮಾಡಿಕೊಂಡಿದ್ದರೂ ಸಹ ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ 1999ರ ಕಲಂ 20(2)ಎ (111)ರ ಅವಕಾಶದಂತೆ ಯಾವುದೇ ಸದಸ್ಯರುಗಳು ಸಭೆಗಳಲ್ಲಿ ಮತ ಚಲಾಯಿಸಲು ತಾನು ಮತ ಚಲಾಯಿಸುವ ದಿನದಿಂದ 12 ತಿಂಗಳು ಮುಂಚಿತವಾಗಿ ಸದರಿ ಸಂಸ್ಥೆಗೆ ಸದಸ್ಯನಾಗಬೇಕಾಗಿರುತ್ತದೆ. ಅಲ್ಲದೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 29(ಸಿ)(2) (ಹೆಚ್) ಪ್ರಕಾರ ಆಡಳಿತ ಮಂಡಳಿ ಸದಸ್ಯರು ಕಲಂ 20(2)ರ ಪ್ರಕಾರ ಮತ ಚಲಾಯಿಸುವ ಅರ್ಹತೆ ಹೊಂದಿಲ್ಲದೆ ಇದ್ದಲ್ಲಿ ಸದರಿ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯನಾಗಲು ಅನರ್ಹರಾಗಿರುತ್ತಾರೆ. ಈ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳದೆ ಶ್ರೀ ಜಿ.ಬಿ. ಸತ್ಯನಾರಾಯಣ ಇವರನ್ನು ಒಂದೇ ದಿನದಲ್ಲಿ "ಎ" ತರಗತಿ ಸದಸ್ಯರನ್ನಾಗಿ ಹೆಚ್ಚುವರಿ ವಿಷಯದಡಿಯಲ್ಲಿ ಮಾಡಿಕೊಂಡು ಅದೇ ದಿನ ಆಡಳಿತ ಮಂಡಳಿ ಸದಸ್ಯಕ್ಕೂ ರೆಗ್ಯುಲರ್ ವಿಷಯದ ಸಂಖ್ಯೆ (7) ರಲ್ಲಿ ಕೋ–ಆಪ್ ಮಾಡಿಕೊಂಡಿರುವುದು ವಿಚಾರಣಾ ವರದಿಯಿಂದ ಸ್ಪಷ್ಟವಾಗಿದೆ. ಆದ್ದರಿಂದ ಸದರಿಯವರು ಈ ಕಾರ್ಖಾನೆಯ ಆಡಳಿತ ಮಂಡಳಿ ಸದಸ್ಯರಾಗಿ ಆಯ್ಕೆಯಾಗಲು ಅನರ್ಹರಾಗುವುದರಿಂದ ಆಡಳಿತ ಮಂಡಳಿಯಲ್ಲಿ ಮುಂದುವರೆಸಲು ಅವಕಾಶವಿರುವುದಿಲ್ಲ. ಹಾಗೂ ಈ ಕ್ರಮ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 29(ಸಿ) (1)(ಹೆಚ್)ಗೆ ವಿರುದ್ಧವಾಗಿರುತ್ತವೆ. ಆದ್ದರಿಂದ ಅವರನ್ನು ಅನರ್ಹಗೊಳಿಸಲು ಸಕ್ಷಮ ಪ್ರಾಧಿಕಾರಕ್ಕೆ ಮನವಿ ಮಾಡತಕ್ಕದ್ದು.

ಅನುಪಾಲನಾ ವರದಿ:

ಶ್ರೀ ಜಿ.ಬಿ. ಸತ್ಯನಾರಾಯಣ ಇವರನ್ನು ಅನರ್ಹಗೊಳಿಸಲು ಸಕ್ಷಮ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಲು ಆದೇಶಿಸಿರುವುದು ಸರಿಯಷ್ಟೆ. ಆದರೆ ಶ್ರೀ ಜಿ.ಬಿ. ಸತ್ಯನಾರಾಯಣ ಇವರನ್ನು ಬೈಲಾ 21(4)ರನ್ವಯ ಆಡಳಿತ ಮಂಡಳಿಯಿಂದ ಕೋ–ಆಫ್ಟ್ ಮೂಲಕ ತುಂಬಲಾಗಿದೆ. ಸಹಕಾರ ಸಂಘಗಳ ಕಾಯ್ದೆ 1959 ಕಲಂ 29(ಇ) ರಲ್ಲಿಯ ಪ್ರಕಾರ ಸಂಘದ ಉಪನಿಯಮಗಳಲ್ಲಿ ನಿರ್ದಿಷ್ಟವಾಗಿ ಯಾವ ರೀತಿ ಕೋ–ಆಫ್ಟ್ ಮಾಡಿಕೊಳ್ಳಬಹುದೆಂದು ಕಾನೂನುಬದ್ಧ ನಿಖರವಾದ ನಿರ್ದೇಶನ ಇರುವುದಿಲ್ಲ. ಆದ್ದರಿಂದ ಆಡಳಿತ ಮಂಡಳಿಯು ತೆಗೆದುಕೊಂಡ ಕ್ರಮ ಕ್ರಮಬದ್ಧವಾಗಿರುತ್ತದೆ. ಆದರೆ ಸಹಕಾರ ಸಂಘಗಳ ಕಾಯ್ದೆ ಕಲಂ, ಉಪನಿಯಮಗಳಲ್ಲಾಗಲೀ, ಅಂತಹ ನೇಮಕಾತಿ ಮಾಡುವಾಗ ಯಾವುದೇ ಷರತ್ತುಗಳನ್ನು ಅನುಸರಿಸಬೇಕೆಂದು ನಿರ್ದಿಷ್ಟವಾಗಿ ನಮೂದು ಮಾಡಿರುವುದಿಲ್ಲ. ಅಂತಹ ನೇಮಕಾತಿ ಆಡಳಿತ ಮಂಡಳಿಯ ನಿವೇದನೆಗೆ ಬಿಟ್ಟಿದ್ದು. ಅಂತಹ ನೇಮಕಾತಿಯಿಂದ ಕಾರ್ಖಾನೆಯ ಸದರಿ ಆರ್ಥಿಕ ವ್ಯವಸ್ಥೆಗಾಗಲೀ, ನಷ್ಟವಾಗಿರುವುದಿಲ್ಲ. ಆಡಳಿತ ಮಂಡಳಿಯವರು ಯಾವುದೇ ನಿಗದಿತ ನಿಯಮವನ್ನು ಉಲ್ಲಂಘಿಸಿರುವುದಿಲ್ಲ. ಆದ ಪ್ರಯುಕ್ತ ಈ ನೇಮಕಾತಿ 29(ಸಿ)(1) (ಹೆಚ್) ಒಳಪಡುತ್ತದೆಂಬುದು ಕೇವಲ ಕಾಲ್ಪನಿಕ. (Imagination) (Malafide). ಆದಾಗ್ಯೂ ಕಬ್ಬು ಅಭಿವೃದ್ಧಿ ಆಯುಕ್ತರು ಹಾಗೂ ಸಕ್ಕರೆ ನಿರ್ದೇಶಕರು ಇವರ ಆದೇಶ ಸಂಖ್ಯೆ ಡಿಎಸ್‌ಕೆ:ಇಎಸ್‌ಟಿಎಸ್:142:2003–04 ದಿನಾಂಕ 13–2–2004ರ ಅನ್ವಯ ದಿನಾಂಕ 23–12–2004ರಂದು ಚುನಾವಣೆ ನಡೆದು ಹೊಸ ಆಡಳಿತ ಮಂಡಳಿಯು ಅಸ್ಥಿತ್ವಕ್ಕೆ ಬಂದಿರುವುದರಿಂದ ಶ್ರೀ ಜಿ.ಬಿ. ಸತ್ಯನಾರಾಯಣ ಇವರು ಚುನಾವಣೆಯಲ್ಲಿ ಸ್ಪರ್ಧಿಸದೇ ಇರುವುದರಿಂದ ಇವರನ್ನು ಅನರ್ಹಗೊಳಿಸಲು ಸಕ್ಷಮ ಪ್ರಾಧಿಕಾರಕ್ಕೆ ಮನವಿ ಸಲ್ಲಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

2. ಆರೋಪ–5:

ಕಾರ್ಖಾನೆಯು 2002–03ನೇ ಸಾಲಿನಲ್ಲಿ ಹಳೆಯ ಟರ್‌ಬೈನ್ ರಿಪೇರಿ ಮಾಡಿಸಿ ಮೆ: ರಾಮ್ ಟರ್ಬೋ ಇಂಜಿನಿಯರಿಂಗ್ ವರ್ಕ್ಸ್ ಇವರಿಗೆ ಟೆಂಡರ್ ಕರೆದು ನಮೂದಿಸಿದ ಮೊತ್ತಕ್ಕೆ ರೂ. 1.50 ಲಕ್ಷಗಳಿಗೆ ರಿಪೇರಿ ಮಾಡಿಸಿ ಈ ಸಂಸ್ಥೆಯು 2 ವರ್ಷಗಳ ಗ್ಯಾರಂಟಿ ಸರ್ಟಿಫಿಕೇಟ್ ನೀಡಿದ್ದರೂ ಸಹ 2003–04ನೇ ಸಾಲಿನ ಹಂಗಾಮು ಪ್ರಾರಂಭಿಸಿದ ಕೆಲವೇ ದಿನಗಳಲ್ಲಿ ಟರ್‌ಬೈನ್ ಅತಿ ಹೆಚ್ಚಿನ ದುರಸ್ತಿಗೆ ಬಂದಿದ್ದು ಶ್ರೀ ರಾಮ್ ಕಂಪನಿಯು ನೀಡಿರುವ ಗ್ಯಾರಂಟಿ ಅವಧಿಯನ್ನು ಉಪಯೋಗಿಸಿಕೊಳ್ಳದೆ ಇದೇ ಸಂಸ್ಥೆಗೆ ರೂ. 8.50 ಲಕ್ಷ ಅಂದಾಜು ವೆಚ್ಚಕ್ಕೆ ಟರ್‌ಬೈನ್ ರಿಪೇರಿ ಕೆಲಸ ಮಾಡಿಸಿರುತ್ತಾರೆ. ಗ್ಯಾರಂಟಿ ಅವಧಿಯಲ್ಲಿಯೇ ಪುನಃ ರೂ. 8.50 ಲಕ್ಷ ರಿಪೇರಿ ಖರ್ಚು ಮಾಡಿರುವುದು ವಿಚಾರಣಾ ವರದಿಯಿಂದ ಸ್ಪಷ್ಟವಾಗಿದೆ. ಸರ್ಕಾರವು ಹೊಸ ಟರ್‌ಬೈನ್ ಖರೀದಿಸಲು ಅನುಮತಿ ನೀಡಿದ್ದರೂ ಸಹ ಕಾರ್ಖಾನೆಯು ಹಳೆಯ ಟರ್‌ಬೈನ್ ಅವಲಂಬಿಸಿಕೊಂಡು 2003–04ನೇ ಸಾಲಿನ ಹಂಗಾಮು ಸಂಪೂರ್ಣವಾಗಿ ಸ್ಥಗಿತಗೊಳಿಸಿ ಕಾರ್ಖಾನೆಗೆ ಹೆಚ್ಚಿನ ಆರ್ಥಿಕ ಹಾನಿ ಉಂಟಾಗಿದ್ದರಿಂದ ಇದಕ್ಕೆ ಆಡಳಿತ ಮಂಡಳಿಯವರು ಜವಾಬ್ದಾರರಾಗಿರುತ್ತಾರೆ. ಹಾಗೂ ಗ್ಯಾರಂಟಿಯ ಅವಧಿಯಲ್ಲಿ ಪುನಃ ರಿಪೇರಿಗೆ ಖರ್ಚು ಮಾಡಿರುವ ರೂ. 8.50 ಲಕ್ಷಗಳನ್ನು ಕಾರ್ಖಾನೆಯ ಆಡಳಿತ ಮಂಡಳಿ ಸದಸ್ಯರಿಂದ ವಸೂಲಾತಿಗೆ ಸಹಕಾರ ಸಂಘಗಳ ಕಾಯ್ದೆ ಕಲಂ 69, 70 ಮತ್ತು 103(1)ರ ಅಡಿಯಲ್ಲಿ ಕ್ರಮ ಜರುಗಿಸತಕ್ಕದ್ದು.

ಅನುಪಾಲನಾ ವರದಿ:

1.5 ಮೆ. ವ್ಯಾಟ್ ಟರ್‌ಬೈನ್‌ಗೆ ಬದಲಾಗಿ 2.5 ಮೆ. ವ್ಯಾಟ್ ಹೊಸ ಟರ್‌ಬೈನ್‌ನ್ನು 2003–04ನೇ ಹಂಗಾಮಿನಲ್ಲಿ ಅಳವಡಿಸದೇ ಹಳೆಯ ಟರ್‌ಬೈನ್ ಗ್ಯಾರಂಟಿ ಅವಧಿಯಲ್ಲಿ ಪುನಃ ರಿಪೇರಿಗೆ ರೂ. 8.50 ಲಕ್ಷಗಳನ್ನು ಖರ್ಚು ಮಾಡಿರುವುದನ್ನು ಆಕ್ಷೇಪಿಸಿ ಕಾರ್ಖಾನೆಯ ಆಡಳಿತ ಮಂಡಳಿಯ ಸದಸ್ಯರಿಂದ ವಸೂಲಾತಿಗೆ ಸಹಕಾರ ಸಂಘಗಳ ಕಾಯ್ದೆ ಕಲಂ 69, 70 ಮತ್ತು 103(1)ರ ಅಡಿಯಲ್ಲಿ ಕಾನೂನು ಕ್ರಮ ಜರುಗಿಸಲು ಆದೇಶಿಸಿರುವುದು ಸರಿಯಷ್ಟೆ. ಆದರೆ 2003–04ನೇ ಹಂಗಾಮು ಪ್ರಾರಂಭಿಸುವ ಮುನ್ನ ಮುಖ್ಯ ಇಂಜಿನಿಯರ್‌ರವರು ಹಳೆಯ ಟರ್‌ಬೈನ್ 2002–03ನೇ ಹಂಗಾಮಿನಲ್ಲಿ ಬಹಳ ಯಶಸ್ವಿಯಾಗಿ ಕೆಲಸ ನಿರ್ವಹಿಸಿದೆ ಎಂದು ತಿಳಿಸಿ 2003–04ನೇ ಹಂಗಾಮಿಗೆ ಟರ್‌ಬೈನ್ ದುರಸ್ತಿಗೊಳಿಸಲು ತಿಳಿಸಿರುವ ಪ್ರಯುಕ್ತ ಹಾಗೂ ಸದರಿ ಹಂಗಾಮಿನಲ್ಲಿ ಹಿಂದಿನ 3 ವರ್ಷಗಳ ಬರಗಾಲದಿಂದ ಕಬ್ಬು ಬೆಳೆಯುವ ಪ್ರಮಾಣವು ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿದ್ದು ಸದರಿ ಹಂಗಾಮಿನ ಪ್ರಾರಂಭದಲ್ಲಿ ಹಂಗಾಮನ್ನು ಪ್ರಾರಂಭಿಸುವುದು ಅನಿಶ್ಚಿತತೆಯಿಂದ ಕೂಡದ್ದು ಅಂತಿಮ ಹಂತದಲ್ಲಿ ಕಾರ್ಖಾನೆಯ ರೈತರ ಹಿತದೃಷ್ಟಿಯಿಂದ ಪ್ರಾರಂಭಿಸಲು ಕ್ರಮ ಜರುಗಿಸಲಾಗಿದೆ. ಸದರಿ ಹಂಗಾಮಿಗೆ ಪರಬಾರೆ ಕಬ್ಬನ್ನು ಹೊರತುಪಡಿಸಿ ದೊರೆಯಬಹುದಾದ ಕಬ್ಬಿನ ಪ್ರಮಾಣವು ಅಂದಾಜು 1.84 ಲಕ್ಷ ಮೆ.ಟನ್ ಆಗಿದ್ದರಿಂದ 2.5 ಮೆ.ವ್ಯಾಟ್ ಸಾಮರ್ಥ್ಯಕ್ಕೆ ಅನುಗುಣವಾಗಿ ದಿನವಹಿ ಹಿರಿತನದ ಆಧಾರದಲ್ಲಿ ಪಕ್ವವಾದ ಅವಶ್ಯ ಕಬ್ಬನ್ನು ಪ್ರತಿದಿನ ಲಭ್ಯ ಕಬ್ಬಿನ ಪ್ರಮಾಣದಲ್ಲಿ ಪೂರೈಕೆ ಮಾಡುವುದು ಸಾಧ್ಯವಾಗದ ಪ್ರಯುಕ್ತ ಅನಿವಾರ್ಯವಾಗಿ ಹೊಸ ಟರ್‌ಬೈನ್ ಅಳವಡಿಸುವ ಬದಲು ಮುಖ್ಯ ಅಭಿಯಂತರರ ತಾಂತ್ರಿಕ

ಅಭಿಪ್ರಾಯದ ಮೇರೆಗೆ ದುರಸ್ತಿಗೊಳಿಸಿ ಹಳೆಯ ಟರ್‌ಬೈನ್‌ನ್ನು ಕೆಲಸಕ್ಕೆ ತೆಗೆದುಕೊಳ್ಳಲು ಸೂಚಿಸಲಾಗಿತ್ತು.

ಕಾರ್ಖಾನೆಯ ಮುಖ್ಯ ಅಭಿಯಂತರರು 2003–04ನೇ ಹಂಗಾಮನ್ನು ಪ್ರಾರಂಭಿಸುವ ಮುನ್ನ ಅರೆ ಹಂಗಾಮಿನಲ್ಲಿ ಹೊಸ ಟರ್‌ಬೈನ್ ಅಳವಡಿಸಲು ತಿಳಿಸಿದ್ದಲ್ಲಿ ಆ ಬಗ್ಗೆ ಆಡಳಿತ ಮಂಡಳಿ ಸೂಕ್ತ ತೀರ್ಮಾನ ತೆಗೆದುಕೊಳ್ಳುತ್ತಿತ್ತು. ಆದರೆ ಈ ಬಗ್ಗೆ ಮುಖ್ಯ ಅಭಿಯಂತರರು ಯಾವುದೇ ಸಲಹೆ ನೀಡಿರುವುದಿಲ್ಲ. ತಾಂತ್ರಿಕ ತೀರ್ಮಾನಗಳ ಬಗ್ಗೆ ತಾಂತ್ರಿಕ ತಜ್ಞರ ಅಭಿಪ್ರಾಯದ ಆಧಾರದ ಮೇಲೆ ಆಡಳಿತ ಮಂಡಳಿ ಕ್ರಮ ಜರುಗಿಸಬೇಕಾಗಿದ್ದು ಆಡಳಿತ ಮಂಡಳಿಯ ಸದಸ್ಯರಾರು ತಾಂತ್ರಿಕ ತಜ್ಞರಲ್ಲ. ಆದ್ದರಿಂದ ಅವರು ಯಾವುದೇ ತಾಂತ್ರಿಕ ಆಧಾರಗಳಿಲ್ಲದೆ ಯಾವುದೇ ನಿರ್ಧಾರ ತೆಗೆದುಕೊಳ್ಳುವುದು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಇಂತಹ ಪರಿಸ್ಥಿತಿಯಲ್ಲಿ ಯಾವುದೇ ಸ್ವಾಯತ್ತ ಆಡಳಿತ ಮಂಡಳಿ ಅಥವಾ ಆಡಳಿತಾಧಿಕಾರಿಗಳು ಇದ್ದರೂ ಸಹ ಬದಲಿ ಕ್ರಮ ಜರುಗಿಸಲು ಸಾಧ್ಯವಿರುತ್ತಿರಲಿಲ್ಲ.

2002–03ನೇ ಹಂಗಾಮಿನ ಪ್ರಾರಂಭದಲ್ಲಿ ಇಂಜಿನಿಯರಿಂಗ್ ವಿಭಾಗದಿಂದ ಟರ್‌ಬೈನ್ ರೋಟರಿನ 8ನೇ ಸಾಲನ್ನು ಮಾತ್ರ ಬದಲಾಯಿಸಲು ಮೆ: ಶ್ರೀರಾಮ್ ಟರ್ಬೋ ಇಂಜಿನಿಯರಿಂಗ್ ವರ್ಕ್ಸ್ ಪ್ರೈ.ಲಿ. ಹೈದ್ರಾಬಾದ್ ಇವರಿಗೆ ಗುತ್ತಿಗೆಯಾಗಿ ರೂ. 1.50 ಲಕ್ಷಗಳಂತೆ ಎರಡು ವರ್ಷ ಗ್ಯಾರಂಟಿಯ ಷರತ್ತಿನನ್ವಯ ಆದೇಶ ನೀಡಲಾಗಿತ್ತು. ಆದರೆ ದಿನಾಂಕ 16–10–2003ರಂದು 2ನೇ ವರ್ಷದ ಗ್ಯಾರಂಟಿ ಅವಧಿಯಲ್ಲಿ ಪುನಃ 8, 9, 10, 11ನೇ ಸಾಲಿನ ರೋಟರ್ ಬ್ಲೇಡ್‌ಗಳು ಹಾಗೂ 9, 10,11ನೇ ಸಾಲಿನ ಕೇಸಿಂಗ್ ಬ್ಲೇಡ್‌ಗಳು ಸಹ ಡ್ಯಾಮೇಜ್ ಆಗಿದ್ದು, 2002–03ನೇ ಹಾಗೂ 2003–04ನೇ ಹಂಗಾಮಿನಲ್ಲಿ ಆಗಿರುವ ದುರಸ್ತಿಗಳು ಬೇರೆ ಬೇರೆಯಾಗಿರುತ್ತವೆ. ಹಂಗಾಮಿನ ಕಬ್ಬು ಅರೆಯುವಿಕೆಯನ್ನು ಮುಂದುವರಿಸಬೇಕಾದ ಪ್ರಯುಕ್ತ ತುರ್ತಾಗಿ ಮುಖ್ಯ ಅಭಿಯಂತರರ ತಾಂತ್ರಿಕ ಅಭಿಪ್ರಾಯ ಮೇರೆಗೆ ಮೆ: ಶ್ರೀರಾಮ್ ಟರ್ಬೋ ಇಂಜಿನಿಯರಿಂಗ್ ವರ್ಕ್ಸ್ ಇವರಿಗೆ ಹಿಂದಿನ ಅಂಗೀಕೃತ ದರದಂತೆ ಕೆಲಸ ನಿರ್ವಹಿಸಲು ಆದೇಶ ನೀಡಲಾಗಿದ್ದು, ಸದರಿ ಸಂಸ್ಥೆಯವರು ಟರ್‌ಬೈನ್‌ನ್ನು ಪೂರ್ಣ ದುರಸ್ತಿಗೊಳಿಸಲು ರೂ. 12.00 ಲಕ್ಷಗಳ ವೆಚ್ಚಕ್ಕೆ ಅಂದಾಜು ಪಟ್ಟಿ ಸಲ್ಲಿಸಿರುವ ಪ್ರಯುಕ್ತ, ಸದರಿ ಆದೇಶದಲ್ಲಿ ಸನ್ನಿವೇಶಕ್ಕೆ ಅನುಗುಣವಾಗಿ ದುರಸ್ತಿದಾರರಿಂದ ದುರಸ್ತಿ ವೆಚ್ಚ ನಿಗದಿಪಡಿಸುವ ವಿಷಯ ಪ್ರಸ್ತಾಪಿಸಿರುವುದಿಲ್ಲ. ಹಿಂದಿನ ಆದೇಶದ ನಿಬಂಧನೆಯ ಅನ್ವಯ ದಂಡ ವಿಧಿಸುವ ಷರತ್ತು ಉಲ್ಲೇಖಿಸಬೇಕಿತ್ತು. ಅದನ್ನು ಉಲ್ಲೇಖಿಸಿದಲ್ಲಿ ಸದರಿ ಸಂಸ್ಥೆಯವರು 2003–04ರ ದುರಸ್ತಿ ಕೆಲಸವನ್ನು ನಿರ್ವಹಿಸಲು ಕಾರ್ಖಾನೆಯ ಹಿತದೃಷ್ಟಿಗೆ ಮಾರಕವಾಗಿ ಮುಂದೆ ಬರುತ್ತಿರಲಿಲ್ಲ. ಗ್ಯಾರಂಟಿ ಅವಧಿಯಲ್ಲಿರುವುದರಿಂದ ಸದರಿ ಸಂಸ್ಥೆಯವರೇ ಕೆಲಸ ನಿರ್ವಹಿಸಬೇಕಾಗಿರುತ್ತೆ.

ಬೇರೆ ಸಂಸ್ಥೆಗೆ ಕೆಲಸದ ಆದೇಶ ನೀಡಿದಲ್ಲಿ ಗ್ಯಾರಂಟಿ ಅವಧಿಯ ನಿಬಂಧನೆ ರೀತ್ಯಾ ದಂಡ ವಸೂಲಿ ಕ್ರಮ ಜರುಗಿಸುವುದು ಕಷ್ಟಕರವಾಗುತ್ತಿತ್ತು. ಈ ಮೇಲಿನ ಎಲ್ಲಾ ಕಾರಣಗಳ ಹಿನ್ನೆಲೆಯಲ್ಲಿ ಅಂದಿನ ತುರ್ತು ಪರಿಸ್ಥಿತಿಯಲ್ಲಿ ಕಾರ್ಖಾನೆಯ ಹಿತದೃಷ್ಟಿಯಿಂದ ಯಾವುದೇ ಷರತ್ತು ನಿಬಂಧನೆಗಳ ಬಗ್ಗೆ ತಗಾದೆ ಎತ್ತದೆ ಕೆಲಸ ಪೂರ್ಣಗೊಳಿಸುವ ಏಕೈಕ ಸದ್ದುದ್ದೇಶದಿಂದ ಹಿಂದಿನ ದರದಂತೆ ಹೆಚ್ಚುವರಿ ಆದೇಶ ನೀಡಿ ಕೆಲಸ ಪೂರ್ಣಗೊಳಿಸಲಾಗಿದೆ.

2002–03ರಲ್ಲಿ 8ನೇ ಸಾಲಿನ ದುರಸ್ತಿ ಬಾಬ್ತು ರೂ. 1.50 ಲಕ್ಷಗಳನ್ನು ಪಾವತಿಸಿದ್ದು, ಗ್ಯಾರಂಟಿ ಅವಧಿಯಲ್ಲಿ 8ನೇ ಸಾಲಿನ ಬ್ಲೇಡ್‌ಗಳು ಸಹ ಡ್ಯಾಮೇಜ ಆದ ಪ್ರಯುಕ್ತ ಪ್ರಸಕ್ತ ಬಾಕಿ ಇರುವ ಬಿಲ್ಲಿನಲ್ಲಿ ದಂಡದ ರೂಪದಲ್ಲಿ ಕಡಿತ ಮಾಡಬೇಕಾಗಿದ್ದು, ಹಣಕಾಸಿನ ತೊಂದರೆಯಿಂದ ಬಿಲ್ ಬಾಕಿ ಬಿಲ್ ಪಾವತಿ ಇಂದಿನವರೆಗೆ ಇತ್ಯಾರ್ಥವಾಗದ ಪ್ರಯುಕ್ತ ರೂ. 1.50 ಲಕ್ಷಗಳನ್ನು ಕಡಿತ ಮಾಡುವುದನ್ನು ಕಾಯ್ದಿರಿಸಲಾಗಿದೆ. ಆದರೆ ಗ್ಯಾರಂಟಿ ಅವಧಿಯನ್ನು ಉಪಯೋಗಿಸಿಕೊಂಡಿರುವುದಿಲ್ಲವೆಂಬುದು ಸತ್ಯಕ್ಕೆ ದೂರವಾದ ವಿಷಯವಾಗಿರುತ್ತದೆ.

ದಿನಾಂಕ 16.11.2004 ರ ಆಡಳಿತ ಮಂಡಳಿಯಲ್ಲಿ ಸದರಿ ದುರಸ್ತಿಯ ಬಗ್ಗೆ ಚರ್ಚಿಸಿ ಈ ಹಿಂದಿನ ದರದ ಆಧಾರದ ಮೇಲೆ ಟರ್‌ಬೈನ್ ರೋಟರ್‌ನ 4 ಸಾಲು ಹಾಗೂ ಕೇಸಿಂಗ್‌ನ 3 ಸಾಲು ಒಟ್ಟು 7 ಸಾಲುಗಳ ಟರ್‌ಬೈನ್ ಬ್ಲೇಡ್‌ಗಳನ್ನು ಬದಲಾಯಿಸಲು ಒಟ್ಟು ರೂ. 7.50 ಲಕ್ಷಗಳನ್ನು ನಿಗದಿಪಡಿಸಲಾಗಿದೆ.

ಆಡಳಿತ ಮಂಡಳಿಯು ಸಹಕಾರಿ ತತ್ವದಡಿಯ ಸ್ವಾಯತ್ತತೆ ಸಂಸ್ಥೆಯಾಗಿದ್ದು, ಪರಿಸ್ಥಿತಿಗೆ ಅನುಗುಣವಾಗಿ ಸೂಕ್ತ ತೀರ್ಮಾನ ತೆಗೆದುಕೊಳ್ಳುವ ಪರಮಾಧಿಕಾರ ಹೊಂದಿರುತ್ತದೆ. ವರದಿಯಲ್ಲಿ ವಿಶ್ಲೇಷಿಸಿರುವ ಆಕ್ಷೇಪಣೆಗಳನ್ನು ಪರಿಶೀಲಿಸಿದಾಗ ವಿಚಾರಣಾಧಿಕಾರಿಯವರು ವಾಸ್ತುವಿಕತೆಯ ಬಗ್ಗೆ ಗಮನಹರಿಸದ ಕೇವಲ ಹೊಸ ಟರ್‌ಬೈನ್ ಅಳವಡಿಸಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಆದರೆ ಮೇಲಯೆ ಅಭಾವದಿಂದ ಸತತ 3 ವರ್ಷಗಳಿಂದ ಭದ್ರಾ ಡ್ಯಾಂನಲ್ಲಿ ನೀರು ಶೇಖರಣೆಯಾಗದೇ ಕಬ್ಬು ಬೆಳೆ ಕುಂಠಿತವಾಗಿ 2.5 ಮೆ. ವ್ಯಾಟ್ ಟರ್‌ಬೈನ್ ಪ್ರಾರಂಭಿಸಿದಾಗ ಪ್ರತಿ ಶಿಫ್ಟ್‌ನಲ್ಲಿ ಅವಶ್ಯಕತೆಯನುಸಾರ ಲಭ್ಯ 85 ಸಾವಿರ ಮೆ.ಟನ್‌ಗಳಲ್ಲಿ ಪ್ರತಿನಿತ್ಯ ಪಕ್ಷವಾದ ಕಬ್ಬನ್ನು ಹಿರಿತನದ ಆಧಾರದ ಪೂರೈಕೆ ಮಾಡಲು ಸಾಧ್ಯವಾಗದೇ ಇರುವ ಸಂದರ್ಭ ಉದ್ಭವಿಸುವ ಹಿನ್ನೆಲೆಯಲ್ಲಿ ಹಾಗೂ 2003–04 ನೇ ಹಂಗಾಮಿಗೆ 85 ಸಾವಿರ ಮೆ.ಟನ್ ಕಬ್ಬು ನುರಿಸಲು ಹೊಸ ಟರ್‌ಬೈನ್ ಬದಲಾಯಿಸಲು ಆಡಳಿತ ಮಂಡಳಿಗೆ ಅಂದಾಜು ರೂ. 1.50 ಕೋಟಿ ಬಂಡವಾಳ ವಿನಿಯೋಗಿಸುವ ಹಣಕಾಸಿನ ಸಾಮರ್ಥ್ಯವಿಲ್ಲದೇ ಇರುವುದರಿಂದ ಹಾಗೂ 2002–03ನೇ ಹಂಗಾಮು ಯಶಸ್ವಿಯಾಗಿ ಹಳೆಯ ಟರ್‌ಬೈನ್‌ನಿಂದ ಕಾರ್ಯ ನಿರ್ವಹಿಸಿರುವುದರಿಂದ, 2003–04ನೇ ಹಂಗಾಮಿನ ಲಭ್ಯ ಕಬ್ಬನ್ನು ಆಧರಿಸಿ ಹೊಸ ಟರ್‌ಬೈನ್ ಅಳವಡಿಸುವ ಬದಲು ಹಳೆ ಟರ್‌ಬೈನ್ ಚಾಲನೆ ಮಾಡಲು ಮುಖ್ಯ ಅಭಿಯಂತರರ ಸ್ಪಷ್ಟ ತಾಂತ್ರಿಕ ಅಭಿಪ್ರಾಯವನ್ನು ಆಧರಿಸಿ ಹೊಸ ಟರ್‌ಬೈನ್ ಅಳವಡಿಸುವುದನ್ನು ಮುಂದೂಡಲಾಯಿತು.

ಆದ್ದರಿಂದ ಈ ಮೇಲಿನ ವಾಸ್ತವಿಕ ಪರಿಸ್ಥಿತಿಯಲ್ಲಿ ಆಡಳಿತ ಮಂಡಳಿಯವರು ಯಾವುದೇ ರೀತಿಯ ಆರ್ಥಿಕ ಹಾನಿ ಉಂಟಾಗುವ ಕ್ರಮಗಳನ್ನು ಜರುಗಿಸಿರುವುದಿಲ್ಲ. ವಿಚಾರಣಾಧಿಕಾರಿಗಳು ಆಡಳಿತ ಮಂಡಳಿಯ ಸದಸ್ಯರ ಹೇಳಿಕೆಗಳನ್ನು ಸರಿಯಾಗಿ ಅರ್ಥೈಸಿಕೊಳ್ಳದೇ ತಪ್ಪು ಕಲ್ಪನೆಯಿಂದ ಸದರಿ ಆರೋಪ ಮಾಡಿರುತ್ತಾರೆ. ಹಾಗೂ ದುರಸ್ತಿಗಾಗಿ ಸದರಿ ಸಂಸ್ಥೆಗೆ ರೂ. 8.50 ಲಕ್ಷಗಳನ್ನು ವೆಚ್ಚ ಮಾಡಿರುವುದಿಲ್ಲ. ಸದರಿ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಹಣ ಪಾವತಿ ಮಾಡುವ ವಿಷಯವು ಹಣಕಾಸಿನ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಪೂರ್ಣ ಇತ್ಯರ್ಥವಾಗದೇ ಇರುವುದರಿಂದ ಈ ಬಗ್ಗೆ ಆಡಳಿತ ಮಂಡಳಿಯ ಮೇಲೆ ಆರೋಪ ಮಾಡುವುದು

ದೋಷಪೂರಿತವಾಗಿರುತ್ತದೆ. ವಿಚಾರಣಾ ವರದಿ ಪುಟ ಸಂಖ್ಯೆ 90 ರಲ್ಲಿ ಹೊಸ ಟರ್‌ಬೈನ್ ಖರೀದಿಸದೇ ಇರುವುದಕ್ಕೆ ಹಣದ ಮುಗ್ಗಟ್ಟು ಕೂಡಾ ಕಾರಣವೆಂದು ಕಾರ್ಖಾನೆಯ ಅಧ್ಯಕ್ಷರ ಹೇಳಿಕೆಯಲ್ಲಿ ತಿಳಿಸಿರುತ್ತಾರೆ ಎಂದು ಮತ್ತು ಕಾರ್ಖಾನೆಯ ಆರ್ಥಿಕ ಸ್ಥಿತಿ ಪೂರಕವಾಗಿಲ್ಲದಿರುವುದು ಸಹ ವಾಸ್ತಾವಾಂಶವಾಗಿದೆ ಎಂದು ವಿಚಾರಣಾಧಿಕಾರಿಗಳೂ ಕೂಡಾ ಮನಗಂಡಿರುವುದರಿಂದ ಹೊಸ ಟರ್‌ಬೈನ್ ಖರೀದಿಸದೇ ಅನಿವಾರ್ಯವಾಗಿ ರೈತರಿಗೆ ಆಗುವ ಅನಾನುಕೂಲದ ತಪ್ಪಿಸಲು ಟರ್‌ಬೈನ್‌ನ ರಿಪೇರಿ ಕಾರ್ಯ ಕೈಗೊಳ್ಳಲಾಗಿರುತ್ತದೆ. ಆದಾಗ್ಯೂ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ರೀತ್ಯಾ ವಸೂಲಾತಿ ಕ್ರಮ ಜರುಗಿಸಲು ಆದೇಶಿಸಿರುವುದು ಸ್ವಾಯತ್ತತೆಗೆ ಧಕ್ಕೆ ತರುವಂತಹ, ವಾಸ್ತವಕ್ಕೆ ದೂರವಾದ ಕಾನೂನು ಬಾಹಿರ, ಆಧಾರ ರಹಿತ ಕ್ರಮವಾಗಿರುತ್ತದೆ. ಆದ್ದರಿಂದ ಆಡಳಿತ ಮಂಡಳಿ ಸದಸ್ಯರಿಂದ ವಸೂಲಾತಿಗೆ ಸಹಕಾರ ಸಂಘಗಳ ಕಾಯ್ದೆ ಕಲಂ 69, 70 ಮತ್ತು 103(1) ರ ಅಡಿಯಲ್ಲಿ ಕ್ರಮ ಜರುಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

3. ಆರೋಪ–6

ಕಬ್ಬು ಬೆಳೆದ ರೈತರಿಗೆ ಅನಾನುಕೂಲ ಉಂಟಾಗಿರುವ ಅಂಶವು ಸಾಬೀತಾಗಿರುವುದಾಗಿ ಹಾಗೂ ಈ ತೊಂದರೆಗೆ ಯಂತ್ರೋಪಕರಣಗಳ ವೈಫಲ್ಯ ಪ್ರಮುಖ ಕಾರಣ ಎಂಬುದಾಗಿ ಕಂಡುಬರುತ್ತದೆ ಎಂದು ಅಲ್ಲದೇ ರೈತರಿಗೆ ಉಂಟಾದ ತೊಂದರೆಯನ್ನು ನಿವಾರಿಸಲು ಕಾರ್ಖಾನೆಯು ಕಬ್ಬನ್ನು ಬೇರೆ ಕಾರ್ಖಾನೆಗೆ ಸಾಗಾಣಿಕೆ ಮಾಡಲು ಕಾರ್ಖಾನೆಯು ಕ್ರಮ ತೆಗೆದುಕೊಂಡಿರುವುದಾಗಿ ದಿನಾಂಕ 10.10.2003 ರಂದು ಕಾರ್ಖಾನೆಯ ಟರ್‌ಬೈನ್‌ನಲ್ಲಿ ಅತಿ ಹೆಚ್ಚಿನ ದುರಸ್ತಿ ಕಂಡುಬಂದಿದ್ದರಿಂದ ಕಬ್ಬು ಅರೆಯುವಿಕೆಯನ್ನು ತಕ್ಷಣದಿಂದ ಅನುವಾರ್ಯವಾಗಿ ಸಲ್ಲಿಸಲಾಗಿದೆ ಎಂದು ವಿಚಾರಣಾಧಿಕಾರಿಗಳು ಅಭಿಪ್ರಾಯ ಪಟ್ಟಿದ್ದಾರೆ. ಹೊಸ ಟರ್‌ಬೈನ್ ಅಳವಡಿಸಿ 2003–04ರ ಹಂಗಾಮು ಸುವ್ಯವಸ್ಥೆಯಲ್ಲಿ ನಡೆಸುವಲ್ಲಿ ಕಾರ್ಖಾನೆಯ ಆಡಳಿತ ಮಂಡಳಿಯು ವೈಫಲ್ಯವಾಗಿದ್ದರಿಂದ ಈ ಬಗ್ಗೆ ಆಡಳಿತ ಮಂಡಳಿ ಸದಸ್ಯರುಗಳು ಜವಾಬ್ದಾರರಾಗಿರುತ್ತಾರೆ.

ಅನುಪಾಲನಾ ವರದಿ:

ಹೊಸ ಟರ್‌ಬೈನ್ ಅಳವಡಿಸಿ 2003–04 ರ ಹಂಗಾಮು ಸುವ್ಯವಸ್ಥೆಯಲ್ಲಿ ನಡೆಸುವಲ್ಲಿ ಕಾರ್ಖಾನೆಯ ಆಡಳಿತ ಮಂಡಳಿಯು ವೈಫಲ್ಯವೆಂದು ಅಭಿಪ್ರಾಯಪಟ್ಟು ಜವಾಬ್ದಾರಿ ನಿದಗಿಪಡಿಸಿರುವುದು ಸರಿಯಷ್ಟೆ ಆದರೆ ಆರೋಪ (2) ಹಾಗೂ ಆರೋಪ (3) ಎರಡರ ಮೂಲ ತಾಂತ್ರಿಕ ಕಾರಣಗಳು ಆಗಿರುತ್ತದೆ. ಆದಾಗ್ಯೂ ಕಾರ್ಖಾನೆಯ ವ್ಯಾಪ್ತಿಯಲ್ಲಿ ಪ್ರಕೃತಿ ವಿಕೋಪದಿಂದ ಹಿಂದಿನ ಸತತ ಮೂರು ವರ್ಷಗಳಲ್ಲಿ ಬರಗಾಲ ಉಂಟಾಗಿ ಭದ್ರಾ ಅಣೆಕಟ್ಟಿನಲ್ಲಿ ನೀರು ಸಂಗ್ರಹವಾಗದೇ ನೀರಿನ ಕೊರತೆಯಿಂದ ಕಬ್ಬು ಬೆಳೆಯುವ ಪ್ರಮಾಣವು ಗಣನೀಯವಾಗಿ ಕಡಿಮೆ ಆಗಿದ್ದು, 2003–04ನೇ ಹಂಗಾಮಿನಲ್ಲಿ ಕಬ್ಬು ಪರಭಾರೆ ಹೊರತು ಪಡಿಸಿ ಕೇವಲ ಅಂದಾಜು 0.84 ಲಕ್ಷ ಮೆ.ಟನ್ ಕಬ್ಬು ದೊರೆಯಬಹುದೆಂದು ನಿರೀಕ್ಷಣೆಯಲ್ಲಿದ್ದು, ಸದರಿ 0.84 ಲಕ್ಷ ಮೆ.ಟನ್ ಕಬ್ಬು ನುರಿಸಲು ರೂ. 1.5 ಕೋಟಿ ಹಣ ವೆಚ್ಚ ಮಾಡಿ 2.5 ಮೆ. ವ್ಯಾಟ್ ಸಾಮರ್ಥ್ಯದ ಟರ್‌ಬೈನ್ ಅಳವಡಿಸುವುದು ಆರ್ಥಿಕವಾಗಿ ಲಾಭದಾಯಕವಾದ ಕ್ರಮವಾಗಿರುವುದಿಲ್ಲ. ಒಂದು ವೇಳೆ ಹೊಸ ಟರ್‌ಬೈನ್ ಅಳವಡಿಸಿದಲ್ಲಿ ಗಾಯದ ಮೇಲೆ ಬರೆ ಎಳೆದಂತಾಗುತ್ತಿತ್ತು. ಆದ ಕಾರಣ ಹೊಸ

ಟರ್‌ಬೈನ್ ಅಳವಡಿಸುವುದನ್ನು ಮುಂದೂಡಲಾಯಿತು. ಒಂದು ವೇಳೆ ಹೊಸ ಟರ್‌ಬೈನ್ ಅಳವಡಿಸಿದ್ದಲ್ಲಿ ಸದರಿ ಹಂಗಾಮಿನಲ್ಲಿರುವ ಕಬ್ಬಿನ ಪೂರೈಕೆ, ಸಕ್ಕರೆ ಇಳುವರಿ ಹಾಗೂ ಯಂತ್ರೋಪಕರಣಗಳ ವೆಚ್ಚ, ಸಕ್ಕರೆ ಪರಿವರ್ತನಾ ವೆಚ್ಚ ಹಾಗೂ ಅದರ ಮೇಲಿನ ಬಡ್ಡಿ ಎಲ್ಲವುಗಳನ್ನು ಪರಿಗಣಿಸಿದಾಗ ಕಾರ್ಖಾನೆಯು ಇನ್ನೂ ಹೆಚ್ಚಿನ ನಷ್ಟವನ್ನು ಅನುಭವಿಸುತ್ತಿತ್ತು.

ಕಾರ್ಖಾನೆಯ ಹಳೆಯ ಟರ್‌ಬೈನ್ 2002–03ನೇ ಹಂಗಾಮಿನಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ ಪ್ರಯುಕ್ತ ಮುಖ್ಯ ಅಭಿಯಂತರರು 2003–04ನೇ ಹಂಗಾಮಿಗೆ ಸದರಿ ಟರ್‌ಬೈನ್ ದುರಸ್ತಿಗೊಳಿಸಿಕೊಡಲು ಕೋರಿರುವ ಮೇರೆಗೆ ಕಬ್ಬಿನ ಪ್ರಮಾಣವು ಕಡಿಮೆ ಇರುವ ಪ್ರಯುಕ್ತ ಹಳೆಯ ಟರ್‌ಬೈನ್ ಉಪಯೋಗಿಸಲಾಗಿತ್ತು. ಹಂಗಾಮಿನಲ್ಲಿ ಎಲ್ಲಾ ಮಿಷಿನರಿಗಳು ಪೂರ್ಣ ಪ್ರಮಾಣದಲ್ಲಿ ಯಾವುದೇ ತೊಂದರೆ ಇಲ್ಲದೆ ಕಾರ್ಯ ನಿರ್ವಹಿಸಿದ್ದು ಆಕಸ್ಮಿಕ ಟರ್‌ಬೈನಿನ ಅಪಘಾತದಿಂದ ಕಬ್ಬು ಅರೆಯುವ ಕಾರ್ಯವನ್ನು ನಿಲ್ಲಿಸಲಾಗಿದೆ. ಆದಾಗ್ಯೂ ಕಾರ್ಖಾನೆಯ ವ್ಯಾಪ್ತಿಯಲ್ಲಿನ ಕಬ್ಬು ಬೆಳೆದ ರೈತರಿಗೆ ಅನುಕೂಲವಾಗಲು ಟರ್‌ಬೈನ್ ದುರಸ್ತಿ ಮಾಡಿ ಪುನಃ ಕಬ್ಬು ಅರೆಯುವಿಕೆ ಪ್ರಾರಂಭಿಸಿ ಪೂರೈಕೆಯಾದ ಕಬ್ಬಿನ ಪೂರ್ಣ ಪ್ರಮಾಣವನ್ನು ಅರೆಯಲಾಗಿರುತ್ತದೆ. ಸುನಾಮಿ ದುರಂತದಂತಹ ರೀತಿ ಅನಿರೀಕ್ಷಿತವೋ, ಟರ್‌ಬೈನ್ ವೈಫಲ್ಯವೋ ಸಹ ಅನಿರೀಕ್ಷಿತ, ಇದೊಂದು ಆಕಸ್ಮಿಕ ಅನಿರೀಕ್ಷಿತ ದುರ್ಘಟನೆಯಾಗಿದ್ದು, ಇದಕ್ಕೆ ಕಾರ್ಖಾನೆಯ ಆಡಳಿತ ಮಂಡಳಿಯ ವೈಕರಿಯಿಂದ ಈ ದುರಂತ ಸಂಭವಿಸಿದೆ ಎಂದು ಕಾಲ್ಪನಿಕ ತೀರ್ಮಾನಕ್ಕೆ ಬರುವುದು ಮತ್ತು ಆಡಳಿತ ಮಂಡಳಿಯ ವೈಫಲ್ಯ ಎಂಬ ಭಾವನಾತ್ಮಕ ಕಲ್ಪನಿಕ ತೀರ್ಮಾನಕ್ಕೆ ಬರುವುದು ಸಾಧುವಲ್ಲ. ಆದ್ದರಿಂದ ಆಡಳಿತ ಮಂಡಳಿಯ ಸದಸ್ಯರುಗಳನ್ನು ಜವಾಬ್ದಾರರನ್ನಾಗಿ ಮಾಡುವುದು ನ್ಯಾಯಸಮ್ಮತವಲ್ಲ ಹಾಗೂ ಆಡಳಿತ ಮಂಡಳಿಯ ಸದಸ್ಯರು ಅಂದಿನ ಪರಿಸ್ಥಿತಿಯನ್ನು ಅವಲೋಕಿಸಿ ಕಾರ್ಖಾನೆಯ ಹಿತದೃಷ್ಟಿಯಿಂದ ಸನ್ನಿವೇಶಕ್ಕೆ, ಸಮಯಕ್ಕೆ ತಕ್ಕಂತೆ ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳುವ ಜವಾಬ್ದಾರಿ ಹೊಂದಿದ್ದು, ಆ ಪ್ರಕಾರ ನ್ಯಾಯ ಸಮ್ಮತ ಕ್ರಮ ತೆಗೆದುಕೊಂಡಿರುತ್ತಾರೆ. ಆದ್ದರಿಂದ ಆಡಳಿತ ಮಂಡಳಿಯ ಸದಸ್ಯರಿಗೆ ಜವಾಬ್ದಾರಿ ನಿಗದಿಪಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

4. ಆರೋಪ:– 7

ಕಾರ್ಖಾನೆಯು ಕಬ್ಬು ನಿಯಂತ್ರಣಾ ಕಾಯ್ದೆ 1966ರ ಅವಕಾಶದಂತೆ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ನಿಗದಿಪಡಿಸಿದ ಶಾಸನಬದ್ಧ ಕಬ್ಬಿನ ಬಿಲ್‌ಬಾಕಿ ರೂ. 164.73 ಲಕ್ಷ ಸೇರಿದಂತೆ ಒಟ್ಟು ರೂ. 355.99 ಲಕ್ಷಗಳನ್ನು ನಿಗದಿತ ಅವಧಿಯಲ್ಲಿ ಅಂದರೆ ಕಬ್ಬು ಸರಬರಾಜು ಮಾಡಿದ 14 ದಿನಗಳೊಳಗೆ ಕಾರ್ಖಾನೆಯು ಪಾವತಿಸಿಲ್ಲದಿರುವುದು ಮತ್ತು ಈ ಬಾಕಿ 2001–02 ರಿಂದ 2003–04 ರವರೆಗಿನ ಸಾಲುಗಳಿಗೆ ಸಂಬಂಧಿಸಿರುವುದು ವಿಚಾರಣಾ ವರದಿಯಿಂದ ಸ್ಪಷ್ಟವಾಗಿದೆ.

ಕಾರ್ಖಾನೆಯ ಆಡಳಿತ ಮಂಡಳಿಯು ಕಾರ್ಖಾನೆಯ ಹಂಗಾಮಿಗೆ ಮುಂಚೆ ಹಣದ ಪಾವತಿಗೆ ಬೇಕಾದ ಸಿದ್ಧತೆ ಮಾಡಿಕೊಳ್ಳುವುದರಲ್ಲಿ ವಿಫಲವಾಗಿ ಕಬ್ಬು ಸರಬರಾಜು ಮಾಡಿದ ರೈತರಿಗೆ ಪಾವತಿಗೆ ಬೇಕಾದ ಒಟ್ಟು ರೂ. 355.99 ಲಕ್ಷಗಳನ್ನು ಪಾವತಿಸುವಲ್ಲಿ ಕಾರ್ಖಾನೆಯು ಸುಸ್ಥಿಯಾಗಿದ್ದು, ಕಬ್ಬು (ನಿಯಂತ್ರಣ) ಕಾಯ್ದೆ 1966ನ್ನು ಉಲ್ಲಂಘನೆ ಮಾಡಿದ್ದರಿಂದ ಕಾರ್ಖಾನೆಯ ಆಡಳಿತ ಮಂಡಳಿ ಸದಸ್ಯರನ್ನು ಜವಾಬ್ದಾರರನ್ನಾಗಿ ಮಾಡಲಾಗಿದೆ.

ಅನುಪಾಲನಾ ವರದಿ:

ಕಾರ್ಖಾನೆಯ ಇತಿಹಾಸದಲ್ಲಿ 2000–01ನೇ ಸಾಲುಗಳವರೆಗೆ ರೈತರ ಕಬ್ಬಿನ ಯಾವುದೇ ಬಾಕಿಯನ್ನು ಉಳಿಸಿಕೊಂಡಿರುವುದಿಲ್ಲ. 2001–02ನೇ ಸಾಲಿನಲ್ಲಿ ಕಾರ್ಖಾನೆಯು 2,62,669 ಮೆ.ಟನ್ ಕಬ್ಬು ಅರೆದು ಶೇ. 10.14 ರಂತೆ, ಇಳುವರಿ ಮೇರೆಗೆ 2,66,223 ಕ್ವಿಂಟಾಲ್ ಸಕ್ಕರೆ ಉತ್ಪಾದಿಸಿರುತ್ತದೆ. ಈ ಹಂಗಾಮಿನಲ್ಲಿ ಸಕ್ಕರೆಯನ್ನು ಕ್ವಿಂಟಾಲ್ ಒಂದಕ್ಕೆ ರೂ. 1200 ರಂತೆ ಅಡವು ಮಾಡಿ ಕ್ಯಾಪ್ ಕ್ರೇಡಿಟ್ ಸಾಲ ಪಡೆದು ರೈತರಿಗೆ ಟನ್ ಒಂದಕ್ಕೆ ರೂ. 800 ರಂತೆ ಪಾವತಿಸಲಾಗಿರುತ್ತದೆ. ಉಳಿದ ಟನ್ ಒಂದಕ್ಕೆ ರೂ. 75 ರಂತೆ ಬಾಕಿ ಪಾವತಿಯನ್ನು ನಂತರ ಕೊಡುವುದಾಗಿ ಆಡಳಿತ ಮಂಡಳಿ ಹಾಗೂ ರೈತರೊಂದಿಗೆ ನಡೆಸಿದ ಸಮಾಲೋಚನೆ ಸಭೆಯ ಪ್ರಕಾರ ತೀರ್ಮಾನವಾಗಿರುತ್ತದೆ.

ಕಾರ್ಖಾನೆಯ ಆಡಳಿತ ಮಂಡಳಿಯವರು ಇಷ್ಟೆಲ್ಲ ಪ್ರಯತ್ನವನ್ನು ಹಾಗೂ ಸಿದ್ಧತೆಯ ನಡೆಸಿದಾಗ್ಯೂ ಪ್ರಯತ್ನಗಳು ಮುಂದುವರೆದಿದ್ದಾಗ್ಯೂ ಕಾರ್ಖಾನೆಯ ಆಡಳಿತ ಮಂಡಳಿಯು ಹಣ ಪಾವತಿಗೆ ಬೇಕಾದ ಸಿದ್ಧತೆ ಮಾಡಿಕೊಳ್ಳುವಲ್ಲಿ ವಿಫಲವಾಗಿದೆ ಎಂಬುದು ಸತ್ಯಕ್ಕೆ ದೂರವಾದ ಸಂಗತಿ.

ಕರ್ನಾಟಕ ರಾಜ್ಯದಲ್ಲಿ ಇತ್ತೀಚಿನ 3 ವರ್ಷಗಳಲ್ಲಿ ಸತತವಾಗಿ ಬರಗಾಲದ ಪರಿಸ್ಥಿತಿ ನಿರ್ಮಾಣವಾಗಿ ಸಕ್ಕರೆ ಕಾರ್ಖಾನೆಗಳ ಪರಿಸ್ಥಿತಿ ಸಂಕಷ್ಟಕ್ಕೆ ಇಡಾಗಿರುವುದು ಸಾರ್ವತ್ರಿಕವಾಗಿ ರಾಜ್ಯ ಸರ್ಕಾರಕ್ಕೂ ಹಾಗೂ ಕೇಂದ್ರ ಸರ್ಕಾರಕ್ಕೂ ಮನವರಿಕೆಯಾಗಿರುವ ವಿಷಯವಾಗಿದೆ ಇದಕ್ಕೆ ಪರಿಹಾರೋಪಾಯಗಳನ್ನು ಕಂಡುಹಿಡಿಯಲು ಕೇಂದ್ರದ ಆಹಾರ ಇಲಾಖೆ ಹಾಗೂ ಕೃಷಿ ಸಚಿವಾಲಯದ ಕಾರ್ಯದರ್ಶಿ ಶ್ರೀ ತುಟೇಜಾ ಸಮಿತಿಯ ತಂಡ ರಾಜ್ಯಕ್ಕೆ ದಿನಾಂಕ 3–7–2004 ರಂದು ಕೇಂದ್ರ ಸರ್ಕಾರಕ್ಕೆ ಮಾರ್ಗೋಪಾಯಗಳನ್ನು ಸೂಚಿಸಿ ವರದಿ ಸಲ್ಲಿಸಿರುತ್ತಾರೆ.

ಕರ್ನಾಟಕ ರಾಜ್ಯ ಸರ್ಕಾರವು ಕೂಡ ದಿನಾಂಕ 13–9–2004ರಂದು ಮಾನ್ಯ ಬ್ರಹತ್ ಕೈಗಾರಿಕೆ ಹಾಗೂ ಮಧ್ಯಮ ಕೈಗಾರಿಕಾ ಸಚಿವರಾದ ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯಾರವರ ಘನ ಅಧ್ಯಕ್ಷತೆಯಲ್ಲಿ ಕಾರ್ಖಾನೆಗಳ ಅಧ್ಯಕ್ಷರುಗಳು, ವ್ಯವಸ್ಥಾಪಕ ನಿರ್ದೇಶಕರುಗಳ ಹಾಗೂ ಸಕ್ಕರೆ ನಿರ್ದೇಶಾನಾಲಯಕ್ಕೆ ಸಂಬಂಧಿಸಿದ ಉನ್ನತ ಮಟ್ಟದ ಸಭೆ ನಡೆಸಲಾಗಿರುತ್ತದೆ. ಅಂದಿನ ಸಭೆಯಲ್ಲಿ ಚರ್ಚಿಸಿದ ಪ್ರಕಾರ ಸಕ್ಕರೆ ಕಾರ್ಖಾನೆಗಳ ಆರ್ಥಿಕ ದುಸ್ಥಿತಿ ಆಡಳಿತ ಮಂಡಳಿಯ ವ್ಯಾಪ್ತಿಗೆ ಮೀರಿದ ಪರಿಸ್ಥಿತಿಯಾಗಿರುವುದರಿಂದ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರಗಳು ಸಕ್ಕರೆ ಕಾರ್ಖಾನೆಗಳ ಸಕ್ಕರೆ ಕಾರ್ಖಾನೆಗಳ ನೆರವಿಗೆ ಬಂದು ಕೆಲವು ಪರಿಹಾರೋಪಾಯಗಳನ್ನು ನೀಡಬೇಕೆಂದು ತೀರ್ಮಾನಕ್ಕೆ ಬರಲಾಗಿದೆ.

ಪರಿಸ್ಥಿತಿ ಹೀಗಿರುವಾಗ ರಾಜಕೀಯ ಪ್ರೇರಿತ ಆರೋಪಗಳನ್ನು ಆಧರಿಸಿ ಕಾರ್ಖಾನೆಯ ಆಡಳಿತ ಮಂಡಳಿಯ ಮೇಲೆ ವ್ಯಥಾ ಆರೋಪ ಮಾಡುವುದು ಸತ್ಯ ಹಾಗೂ ಅವಾಸ್ತವಿಕ, ಅವೈಜ್ಞಾನಿಕ.

ಈ ರೀತಿ ಟನ್ ಒಂದಕ್ಕೆ ರೂ. 75 ರಂತೆ ಪಾವತಿಸಬೇಕಾದ ಮೊತ್ತ ರೂ. 191.20 ಲಕ್ಷ 2001–02 ನೇ ಸಾಲಿಗೆ ಶಾಸನಬದ್ಧ ಕಬ್ಬಿನ ಬೆಲೆ ರೂ. 773.80 ನಿಗದಿಯಾಗಿದ್ದು, ಕಾರ್ಖಾನೆಯು

2001–02ನೇ ಸಾಲಿಗೆ ಮೊದಲ ಹಂತದಲ್ಲಿ ಟನ್ ಒಂದಕ್ಕೆ ರೂ. 800 ರಂತೆ ಕಬ್ಬು ಬೆಲೆ ಪಾವತಿಸಿರುವುದರಿಂದ ಶಾಸನಬದ್ಧವಾಗಿ ಕೊಡಬೇಕಾಗಿದ್ದ ಎಸ್‌ಎಂಪಿ ಕಬ್ಬು ಬಿಲ್ ಬಾಕಿ ಇರುವುದಿಲ್ಲ. ಆದರೆ ರೈತರೊಂದಿಗೆ ಚರ್ಚಿಸಿ ನಿಗದಿಪಡಿಸಿರುವ ಪ್ರಕಾರ ಟನ್ ಒಂದಕ್ಕೆ ರೂ. 875.00 ನಿಗದಿಗೊಳಿಸಿರುವುದರಿಂದ ಟನ್ ಒಂದಕ್ಕೆ ರೂ. 75.00 ರಂತೆ ಪಾವತಿಸಬೇಕಾಗಿರುತ್ತದೆ.

ಅದೇ ರೀತಿ 2002–03ನೇ ಹಂಗಾಮಿಗೆ ಶಾಸನಬದ್ಧ ಕಬ್ಬು ಬೆಲೆ ರೂ. 815.40 ಇದ್ದು, ಟನ್ ಒಂದಕ್ಕೆ ರೂ. 875.00 ರಂತೆ ಪಾವತಿಸಲು ರೈತರೊಂದಿಗೆ ಚರ್ಚಿಸಿ ಒಪ್ಪಿಕೊಳ್ಳಲಾಗಿದೆ. ಒಪ್ಪಿಕೊಂಡ ಪ್ರಕಾರ ಟನ್ ಒಂದಕ್ಕೆ ರೂ. 75.00 ರಂತೆ ರೂ. 154.60 ಲಕ್ಷ ಬಾಕಿ ಪಾವತಿಸಬೇಕಾಗಿತ್ತು.

ಕಾರ್ಖಾನೆಯು 2003–04ನೇ ಹಂಗಾಮಿಗೆ ರೈತರೊಂದಿಗೆ ಸಮಾಲೋಚಿಸಿ ಮಾರುಕಟ್ಟೆಯಲ್ಲಿ ಸಕ್ಕರೆ ಧಾರಣೆ ಕುಸಿತಗೊಂಡಿದ್ದರಿಂದ ಟನ್ ಒಂದಕ್ಕೆ ಕಬ್ಬು ಬೆಲೆ ರೂ. 860.00 ರಂತೆ ಪಾವತಿಸಲು ತೀರ್ಮಾನಿಸಲಾಗಿತ್ತು. ಆ ಪ್ರಕಾರ ಮೊದಲ ಹಂತದಲ್ಲಿ ಟನ್ ಒಂದಕ್ಕೆ ರೂ. 800.00 ರಂತೆ ಪಾವತಿಸಲು ಕ್ರಮ ನೀಡಲಾಗಿದೆ. ಟನ್ ಒಂದಕ್ಕೆ ರೂ. 60.00 ರಂತೆ ಪಾವತಿಸಬೇಕಾದ ಬಾಕಿ ಮೊತ್ತ ರೂ. 10.13 ಲಕ್ಷವಿರುತ್ತದೆ.

ಆರೋಪದಲ್ಲಿ ಹೇಳಿರುವಂತೆ ರೂ. 355.99 ಲಕ್ಷ ಬಾಕಿ ಪಾವತಿಸುವ ಮೊತ್ತ ಈ ಕೆಳಕಂಡಂತೆ ಇರುತ್ತದೆ.

2001–02ನೇ ಸಾಲಿಗೆ	ರೂ. 191.26 ಲಕ್ಷ
2002–03ನೇ ಸಾಲಿಗೆ	ರೂ. 154.60 ಲಕ್ಷ
2003–04ನೇ ಸಾಲಿಗೆ	ರೂ. 10.13 ಲಕ್ಷ
ಒಟ್ಟು	**ರೂ. 355.99 ಲಕ್ಷ**

ಮುಕ್ತ ಮಾರುಕಟ್ಟೆಯಲ್ಲಿ ಸಕ್ಕರೆ ಬೆಲೆಯು ಅನಿರೀಕ್ಷಿತವಾಗಿ ಕುಸಿತವಾಗಿದ್ದರಿಂದ ಹಾಗೂ ನಗದು ಸಾಲದ ಮೇಲಿನ ಬಡ್ಡಿಯ ಹೊರೆ ಜಾಸ್ತಿಯಾಗಿದ್ದರಿಂದ ಕಬ್ಬು ಬೆಲೆ ಪಾವತಿಗೆ ಕೊರತೆ ಬಿಳುವ ಮೊತ್ತವನ್ನು ಸರಿದೂಗಿಸಲು ರೂ. 8.00 ಕೋಟಿಗಳಷ್ಟು ಮೃದು ಸಾಲವನ್ನು ಮಂಜೂರು ಮಾಡುವಂತೆ ಕೋರಿ ರಾಜ್ಯ ಸರ್ಕಾರವನ್ನು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು ಇವರ ಮುಖಾಂತರ ಪತ್ರ ಸಂಖ್ಯೆ: ಭಸಸಕಾ:ಸಾಲೆವಿ:6402:03:2002–03 ದಿನಾಂಕ 5–12–2002 ರಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಸಹಕಾರ ಇಲಾಖೆ, ಇವರಿಗೆ ಪತ್ರ ಸಂಖ್ಯೆ: ಡಿಎಸ್‌ಕೆ: ಎಫ್‌ಐಎನ್:43:2002–03 ದಿನಾಂಕ 13–01–2003 ರಲ್ಲಿ ಶಿಫಾರಸ್ಸು ಮಾಡಿ ಕಳುಹಿಸಿದ್ದು, ಸರ್ಕಾರದ ಮಟ್ಟದಲ್ಲಿ ಇನ್ನೂ ತೀರ್ಮಾನವಾಗಬೇಕಾಗಿದೆ. ಇದಲ್ಲದೇ ಮೃದುಸಾಲ ಮಂಜೂರಾತಿಗಾಗಿ ಮರುಜ್ಞಾಪನಾ ಪತ್ರವನ್ನು ಕರ್ನಾಟಕ ಸರ್ಕಾರದ ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಸಲ್ಲಿಸಲಾಗಿದೆ. ಈ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಮಾನ್ಯ ಸಕ್ಕರೆ ನಿರ್ದೇಶಕರಿಂದ ಪೂರಕ ಮಾಹಿತಿಯು ಸರ್ಕಾರದ ಹಣಕಾಸು ಇಲಾಖೆಗೆ ಸಲ್ಲಿಕೆಯಾಗಬೇಕಾಗಿರುತ್ತದೆ. ಇದರಲ್ಲಿ ರೈತರ ಕಬ್ಬು ಬೆಲೆ ಬಾಕಿ ಪಾವತಿಸುವ ಬಗ್ಗೆ ಅವಕಾಶ ಕಲ್ಪಿಸಲಾಗಿದೆ. ಇದೇ ರೀತಿ ಇತರೇ ಸಹಕಾರಿ ಸಕ್ಕರೆ ಕಾರ್ಖಾನೆಗಳು ಕಬ್ಬು ಬೆಲೆ ಬಾಕಿ ಉಳಿಸಿಕೊಂಡಿರುವುದು ತಮಗೆ ತಿಳಿದ ವಿಷಯವಾಗಿರುತ್ತದೆ.

ಈ ಮೇಲ್ಕಂಡ ಅಂಶಗಳನ್ನು ಗಮನಿಸಿದಾಗ ಕಬ್ಬು ಬೆಲೆ ಪಾವತಿಯು ರಾಷ್ಟ್ರೀಯ ಸಮಸ್ಯೆಯಾಗಿದ್ದು, ರಾಜ್ಯದ ಇತರೆ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಹೊರತಾಗಿರುವುದಿಲ್ಲ. ಈ ಸಮಸ್ಯೆಯು ಕಾರ್ಖಾನೆಯ ಆಡಳಿತ ಮಂಡಳಿ ವ್ಯಾಪ್ತಿ ಮೀರಿರುತ್ತದೆ. ಆದಾಗ್ಯೂ, ಕಾರ್ಖಾನೆಗೆ ಲಭ್ಯವಿರುವ ಸಂಪನ್ಮೂಲಗಳಲ್ಲಿಯೇ ಆದ್ಯತೆಯ ಮೇಲೆ ಕಬ್ಬು ಬೆಲೆ ಪಾವತಿಸಲಾಗಿರುತ್ತದೆ. ಈ ವಿಷಯದಲ್ಲಿ ಆಡಳಿತ ಮಂಡಳಿಯು ವಿಫಲವಾಗಿರುವುದೆಂಬುದು ಆಧಾರ ರಹಿತ ಹಾಗೂ ರಾಜಕೀಯ ಪ್ರೇರಿತವಾಗಿರುತ್ತದೆ. ಸದರಿ ಆರ್ಥಿಕ ಕೊರತೆಗೆ ಆಡಳಿತ ಮಂಡಳಿ ಹೊಣೆಯಲ್ಲ, ಯಾವುದೇ ಆಡಳಿತ ಮಂಡಳಿ ಅಧಿಕಾರದಲ್ಲಿದ್ದರೂ ಸಹ ಇಂತಹ ಸಮಸ್ಯೆ ತಪ್ಪಿಸಲು ಸಾಧ್ಯವಿಲ್ಲದ ಪರಿಸ್ಥಿತಿಯಾಗಿರುತ್ತದೆ. ಆಡಳಿತ ಮಂಡಳಿಯ ಪರವಾಗಿ ಕಾರ್ಖಾನೆಯ ಅಧ್ಯಕ್ಷರು. ರೈತರ ಕಬ್ಬು ನಾಟಿ ತೀರುವಳಿಗೋಸ್ಕರ ರಾಜ್ಯ ಸರ್ಕಾರದ ಮಾನ್ಯ ಉಪ ಮಂತ್ರಿಗಳಿಗೆ ಮರು ಜ್ಞಾಪನಾ ಪತ್ರ ಸಲ್ಲಿಸಿ, ಮೃದುಸಾಲ ಪಡೆಯಲು ತೀವ್ರ ಪ್ರಯತ್ನ ಮಾಡುತ್ತಿದ್ದಾಗ್ಯೂ ಹಾಗೂ ರಾಜ್ಯ ಸರ್ಕಾರದ ಮಟ್ಟದಲ್ಲಿ ವಿಷಯ ತೀವ್ರ ಪರಿಶೀಲನೆಯಲ್ಲಿದ್ದಾಗ್ಯೂ ಆಡಳಿತ ಮಂಡಳಿಯ ಸದಸ್ಯರನ್ನು ಜವಾಬ್ದಾರರನ್ನಾಗಿ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

5. ಆರೋಪ–8:

ಕಾರ್ಖಾನೆಯ ಟರ್ಬೈನ್ ರಿಪೇರಿಗೆ ಬಂದು 2003–04ನೇ ಕಬ್ಬು ನುರಿಸುವಿಕೆ ಹಂಗಾಮು ಸ್ಥಗಿತಗೊಂಡು ಕಟಾವು ಆದ ಕಬ್ಬು ಹಾಗೆಯೇ ಉಳಿದು ಅದನ್ನು ದಾವಣಗೆರೆ ಸಕ್ಕರೆ ಕಾರ್ಖಾನೆಗೆ ರವಾನಿಸಿರುವುದು ಮತ್ತು ಈ ಬಗ್ಗೆ ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೆ ರವಾನಿಸಿರುವುದು ವಿಚಾರಣಾ ವರದಿಯಿಂದ ಸ್ಪಷ್ಟವಾಗುತ್ತದೆ. ಇದು ಕಬ್ಬು (ನಿಯಂತ್ರಣ) ಕಾಯ್ದೆ (1966)ರ ಮತ್ತು ಅಗತ್ಯ ವಸ್ತುಗಳ ಕಾಯ್ದೆಗಳ ಸ್ಪಷ್ಟ ಉಲ್ಲಂಘನೆಯಾಗಿರುವುದರಿಂದ ಇದಕ್ಕೆ ಆಡಳಿತ ಮಂಡಳಿಯು ಜವಾಬ್ದಾರರಾಗುತ್ತಾರೆ.

ಅನುಪಾಲನಾ ವರದಿ:

ಕಾರ್ಖಾನೆಯ ಆಡಳಿತ ಮಂಡಳಿಯು ಸ್ವಾಯತ್ತ ಮಂಡಳಿಯಾಗಿದ್ದು ಸ್ಥಾನಿಕ ತುರ್ತು ಪರಿಸ್ಥಿತಿಯನ್ನು ಅವಲೋಕಿಸಿ ಅಗತ್ಯ ತೀರ್ಮಾನ ತೆಗೆದುಕೊಳ್ಳುವಂತದ್ದಾಗಿದೆ. ಕಬ್ಬು ದಾಸ್ತಾನಾರ್ಹವಾದ ವಸ್ತುವಲ್ಲವಾದ್ದರಿಂದ ಕಬ್ಬು ಬೆಳೆಗಾರರ ಹಿತರಕ್ಷಣೆ ಮಾಡುವ ಹಾಗೂ ಆಗುವ ನಷ್ಟವನ್ನು ತಡೆಯುವ ಸದುದ್ದೇಶದಿಂದ ಆಡಳಿತ ಮಂಡಳಿಯು ನ್ಯಾಯ ಸಮ್ಮತದ ತೀರ್ಮಾನ ಕೈಗೊಂಡು ಪಕ್ಕದ ಕಾರ್ಖಾನೆಗೆ ಕಬ್ಬನ್ನು ಸಾಗಿಸಲಾಗಿರುತ್ತದೆ. ಇದು ರೈತರ ಹಿತರಕ್ಷಣೆಯ ದೃಷ್ಟಿಯಿಂದ ಒಂದು ಸರಿಪಡಿಸಬಹುದಾದಂತಹ ಪ್ರಧಾನವಲ್ಲದ ನಗಣ್ಯ ನ್ಯೂನತೆಯಾಗಿರುತ್ತದೆ. ಇಂತಹ ಉತ್ತಮವಾದ ತುರ್ತು ತೀರ್ಮಾನವನ್ನು ಆಡಳಿತ ಮಂಡಳಿಯು ತೆಗೆದುಕೊಳ್ಳದೆ ಇದ್ದಲ್ಲಿ ರೈತರಿಗೆ ಭರಿಸಲಾಗದೆ ಹಾಗೂ ಸರಿದೂಗಿಸಲು ಸಾಧ್ಯವಾಗದ ನಷ್ಟವಾಗುತ್ತಿತ್ತು. ಸದರಿ ಕ್ರಮವು ಇಂತಹ ಪರಿಸ್ಥಿತಿಯಲ್ಲಿ ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳೂ ಅನುಸರಿಸುವಂತದ್ದಾಗಿದ್ದು, ಇದಕ್ಕೆ ನಮ್ಮ ಕಾರ್ಖಾನೆಯು ಹೊರತಾದುದಲ್ಲ. ಆದುದರಿಂದ ಆಡಳಿತ ಮಂಡಳಿ ಕ್ರಮವು ರೈತರಿಗೆ ಅನುಕೂಲಕರವಾದ ಕ್ರಮವೇ ವಿನಃ ಪ್ರತಿಕೂಲವಾದ ಕ್ರಮವಲ್ಲ. ಇದೊಂದು ತಾತ್ಕಾಲಿಕ ತುರ್ತು ವ್ಯವಸ್ಥೆಯಾಗಿರುತ್ತದೆ.

2003–04ನೇ ಕಬ್ಬು ಅರೆಯುವ ಹಂಗಾಮನ್ನು ಸ್ಥಗಿತಗೊಳಿಸುವ ಮುನ್ನ ಪದ್ಧತಿಯಂತೆ ಸಕ್ಷಮ ಪ್ರಾಧಿಕಾರದ ಅನುಮತಿ ನಂ.ಸಿಐ/285/ಎಸ್‌ಜಿಎಫ್/2003, ದಿನಾಂಕ: 30.12.2003 ರಲ್ಲಿ ಪಡೆದು ಕಟಾವಾಗದೆ ಬಾಕಿ ಉಳಿದ ಕಬ್ಬನ್ನು ಮೇಲಿನ ಅನುಮತಿಯ ಮೇರೆಗೆ ಮೆ: ದಾವಣಗೆರೆ ಸಕ್ಕರೆ ಕಂಪೆನಿ, ಇವರಿಗೆ ಸರಬರಾಜು ಮಾಡಿಸಲಾಗಿರುತ್ತದೆ. ಕಾರಣ, ಈ ಆಪಾದನೆಯಿಂದ ಯಾವುದೇ ಕಾಯ್ದೆಗಳ ಉಲ್ಲಂಘನೆಯಾಗಿರುವುದಿಲ್ಲ ಹಾಗೂ ಕಾರ್ಖಾನೆಗೆ ಯಾವುದೇ ನಷ್ಟ ಉಂಟಾಗಿರುವುದಿಲ್ಲ. ಇದು ಸಾಧುವಲ್ಲ, ಸೂಕ್ತವಲ್ಲ, ಇದು ಆಡಳಿತ ಮಂಡಳಿಯನ್ನು ಮೆಚ್ಚುವಂತಹ ಕ್ರಮವಾಗಿದೆ. ಈ ವಿಷಯದ ಬಗ್ಗೆ ವಿಚಾರಣಾ ವರದಿ ಪುಟ ಸಂಖ್ಯೆ–118 ರಲ್ಲಿ ವಿಚಾರಣಾಧಿಕಾರಿಯವರು ಕೂಡಾ ಯಾವುದೇ ಗಮನಾರ್ಹ ತೀರ್ಮ ವ್ಯಕ್ತಪಡಿಸಿಲ್ಲ. ಆದಾಗ್ಯೂ ಆಯುಕ್ತರು ಈ ರೀತಿ ಕಾಯ್ದೆ ಉಲ್ಲಂಘನೆಯಾಗಿದೆ ಎಂಬುದು ಸರಿಯಲ್ಲ. ಇದಕ್ಕೆ ಆಡಳಿತ ಮಂಡಳಿಯವರು ಜವಾಬ್ದಾರರಲ್ಲ.

6. ಆರೋಪ–9

ಕಾರ್ಖಾನೆಯು 2002–03ನೇ ಲೆಕ್ಕ ಪರಿಶೋಧನೆಯ ಪ್ರಕಾರ 31–3–2003ಕ್ಕೆ ಬಳಕೆಯಾಗದೆ ಕ್ಷೇತ್ರಾಭಿವೃದ್ಧಿ ನಿಧಿ ರೂ. 2,56,51,693.66 ಇದ್ದು ಇದನ್ನು ಬ್ಯಾಂಕಿನಲ್ಲಿ ಪ್ರತ್ಯೇಕವಾಗಿ ಠೇವಣಿ ಮಾಡಿರುವುದಿಲ್ಲ. ಇದರಲ್ಲಿ ರೂ. 1,86,90,137.80 ಎಸ್‌ಆರ್‌ಡಿ ಹಣ ಈ ನಿಧಿಗೆ ವರ್ಗಾಯಿಸಿರುವುದು ಒಳಗೊಂಡಿರುತ್ತದೆ. ಈ ನಿಧಿ ಬೈಲಾ ನಿಯಮದ ಅನುಸಾರ ನಿರ್ದಿಷ್ಟ ಉದ್ದೇಶಕ್ಕಾಗಿ ಬಳಕೆಯಾಗದೇ ಕಾರ್ಖಾನೆಯ ವ್ಯವಹಾರದಲ್ಲಿ ಬಳಸಿಕೊಂಡಿರುವುದು ವಿಚಾರಣಾ ವರದಿಯಿಂದ ಸ್ಪಷ್ಟವಾಗುತ್ತದೆ. ಇದು ಸಂಬಂಧಪಟ್ಟ ಕಾರ್ಖಾನೆಯ ಆಡಳಿಯ ಮಂಡಳಿಯ ವೈಫಲ್ಯವಾಗಿರುವುದು ಮತ್ತು ಇದಕ್ಕೆ ಆಡಳಿತ ಮಂಡಳಿಯ ಸದಸ್ಯರು ಜವಾಬ್ದಾರರಾಗಿರುತ್ತಾರೆ.

ಅನುಪಾಲನಾ ವರದಿ:

ದಿನಾಂಕ: 31–3–2003ಕ್ಕೆ ಕಾರ್ಖಾನೆಯ ಲೆಕ್ಕ ಪರಿಶೋಧನಾ ವರದಿಯ ಪ್ರಕಾರ ಒಟ್ಟು ಕ್ಷೇತ್ರಾಭಿವೃದ್ಧಿ ನಿಧಿ ರೂ. 2,56,51,693.66 ಇರುತ್ತದೆ. ಈ ಹಣವನ್ನು ಪ್ರತ್ಯೇಕ ಬ್ಯಾಂಕ್ ಖಾತೆಯಲ್ಲಿ ಠೇವಣಿ ಮಾಡಬೇಕೆಂಬ ನಿಯಮ, ಕಾರ್ಖಾನೆಯ ಉಪನಿಯಮದಲ್ಲಿ ಇರುವುದಿಲ್ಲ. ಸದರಿ ಮೊತ್ತವು ಕೇವಲ ಪುಸ್ತಕ ಹೊಂದಾಣಿಕೆಯ ಮೊತ್ತವಾಗಿದ್ದು ನಗದು ಸಂಗ್ರಹ ಮಾಡಿರುವುದಿಲ್ಲ. ಅಲ್ಲದೆ, ಕಾರ್ಖಾನೆಯ ದುಡಿಯುವ ಬಂಡವಾಳಕ್ಕೆ ಶೇ. 16 ಕ್ಕಿಂತ ಹೆಚ್ಚಿನ ಬಡ್ಡಿ ದರ ಪಾವತಿಸಿ ಸಾಲ ಪಡೆಯುತ್ತಿರುವುದರಿಂದ ಕಾರ್ಖಾನೆಯು ಸದರಿ ಮೊತ್ತವನ್ನು ಕಡಿಮೆ ಬಡ್ಡಿ ದರದಲ್ಲಿ ಠೇವಣಿಯಲ್ಲಿ ತೊಡಗಿಸಿರುವುದರಿಂದ ಕಾರ್ಖಾನೆಯ ಆರ್ಥಿಕ ಪರಿಸ್ಥಿತಿಯ ಮೇಲೆ ಹೆಚ್ಚಿನ ಹೊರೆ ಬೀಳುವ ಕಾರಣದಿಂದ ಸದರಿ ಮೊತ್ತಕ್ಕೆ ಹೆಚ್ಚಿನ ಸಾಲ ಮಾಡಿ ಬ್ಯಾಂಕಿನಲ್ಲಿ ಠೇವಣಿ ಮಾಡುವುದು ಕಾರ್ಖಾನೆಯ ಹಿತದೃಷ್ಟಿಯಿಂದ ಸೂಕ್ತವಲ್ಲವೆಂದು ಭಾವಿಸಿ ಸದರಿ ಮೊತ್ತವನ್ನು ಪ್ರತ್ಯೇಕ ಖಾತೆಯಲ್ಲಿ ಇಟ್ಟಿರುವುದಿಲ್ಲ. ಕಾರ್ಖಾನೆಯ ಆರ್ಥಿಕ ಸ್ಥಿತಿ ಸುಧಾರಿಸಿದ ಸಂದರ್ಭದಲ್ಲಿ ಸದರಿ ಖಾತೆಗೆ ತೊಡಗಿಸಿ ಬೈಲಾ ನಿಯಮಾನುಸಾರ ನಿರ್ದಿಷ್ಟ ಉದ್ದೇಶಗಳಿಗೆ ಕಾರ್ಖಾನೆಯ ಮತ್ತು ರೈತರ ಹಿತಕ್ಕೆ ಪೂರಕವಾಗುವ ರೀತಿ ಬಳಕೆಯಾಗುವ ರೀತಿ ಕ್ರಮ ತೆಗೆದುಕೊಳ್ಳಲಾಗುವುದು. ಆದ್ದರಿಂದ ಸದರಿ ರಾಜಕೀಯ ಪ್ರೇರಿತ ಆರೋಪವನ್ನು ಆಧಾರವಾಗಿರಿಸಿಕೊಂಡು ನ್ಯಾಯ ಸಮ್ಮತ ಕಾರ್ಯ ನಿರ್ವಹಿಸುವ ಆಡಳಿತ

ಮಂಡಳಿಯ ಮೇಲೆ ವೈಫಲ್ಯವಾಗಿದೆಯೆಂದು ದೂರಿ ಆಡಳಿತ ಮಂಡಳಿಯ ಸದಸ್ಯರನ್ನು ಜವಾಬ್ದಾರರನ್ನಾಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

7. ಆರೋಪ–12:

ಕಾರ್ಖಾನೆಯು 2002–03ನೇ ಸಾಲಿನಲ್ಲಿ ಅಳವಡಿಸಿರುವ ಇಂಜಕ್ಷನ್ ಪೈಪ್ ಲೈನ್‌ಗಳು ಕಳಪೆ ಮಟ್ಟದಾಗಿದ್ದು, ಈ ಪೈಪುಗಳು ರಾಸಾಯನಿಕ ಕ್ರಿಯೆಗೆ ಒಳಗಾಗಿ ಈ ಪೈಪುಗಳು ಕೆಲವೇ ದಿನಗಳ ಅಂತರದಲ್ಲಿ ಹಾಳಾಗಿದ್ದು ಇದಕ್ಕೆ ಚೀಫ್ ಕೆಮಿಸ್ಟ್, ಡೆಪ್ಯೂಟಿ ಚೀಫ್ ಕೆಮಿಸ್ಟ್ ಮತ್ತು ನಾಲ್ಕು ಜನ ಮ್ಯಾನುಫ್ಯಾಕ್ಚರಿಂಗ್ ಕೆಮಿಸ್ಟ್‌ಗಳು ಜವಾಬ್ದಾರರಾಗಿರುತ್ತಾರೆ ಎಂದು ಈ ಪೈಪುಗಳನ್ನು ಅಳವಡಿಸಲು ರೂ. 7,26,912.00 ಖರ್ಚು ಮಾಡಿರುವುದಾಗಿ ವಿಚಾರಣಾ ವರದಿಯಿಂದ ಸ್ಪಷ್ಟವಾಗಿದೆ. ಈ ನಷ್ಟದ ಮೊತ್ತವನ್ನು ಸಂಬಂಧಿಸಿದವರಿಂದ ವಸೂಲಾತಿಗೆ ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ 1959 ಕಲಂ 69.70 ಮತ್ತು 103 ರಡಿಯಲ್ಲಿ ವಸೂಲಾತಿ ಮಾಡಿಕೊಳ್ಳಲು ಕಾನೂನು ಕ್ರಮ ವಹಿಸತಕ್ಕದ್ದು. ಅಲ್ಲದೇ ಇಂತಹ ಪ್ರಮುಖ ಸಂದರ್ಭದಲ್ಲಿ ಸಕಾಲದಲ್ಲಿ ಸ್ಪಂದಿಸಿ ಸೂಕ್ತ ಗಮನ ನೀಡದೇ ಇರುವುದು ಆಡಳಿತ ಮಂಡಳಿಯ ವೈಫಲ್ಯವಾಗಿದೆ.

ಅನುಪಾಲನಾ ವರದಿ:

ಕಾರ್ಖಾನೆಯು 2002–03ನೇ ಸಾಲಿಗೆ ಅಳವಡಿಸಲಾದ ಇಂಜಕ್ಷನ್ ಪೈಪ್ ಲೈನುಗಳು ಒಳ್ಳೆಯ ಗುಣಮಟ್ಟದವುಗಳಾಗಿರುತ್ತದೆ ಮತ್ತು ಅಳವಡಿಸಿದ ಪೈಪುಗಳು ಬೇಡಿಕೆ ರೀತ್ಯಾ ನಿಶ್ಚಿತ ಗುಣಮಟ್ಟದವುಗಳಾಗಿದ್ದು ಅವುಗಳ ಗುಣಮಟ್ಟ ಐ.ಎಸ್.2062–1999 ಗ್ರೇಡ್ 'ಬಿ' ಎಂದು ಮೆ: ಜಿಯಾಲಜಿಕಲ್ ಮತ್ತು ಮೆಟಲಾಜಿಕಲ್ ಲ್ಯಾಬೋರೇಟರಿ, ಬೆಂಗಳೂರು ಇವರಿಂದ ದೃಢ ಪಟ್ಟಿರುತ್ತದೆ. ಹಾಗಿದ್ದ ಮೇಲೆ ಅವುಗಳ ಕಳಪೆ ಗುಣಮಟ್ಟದವುಗಳು ಎಂದು ಆಧಾರರಹಿತವಾಗಿ ಹೇಳುವುದು ಸರಿಯಲ್ಲವೆಂದು (Subjective observation) ಅಭಿಪ್ರಾಯ ಪಡಲಾಯಿತು.

ಸದರಿ ಪೈಪುಗಳು ಹಾಳಾಗಲು 3 ವರ್ಷಗಳ ಬರಗಾಲದ ನಿಮಿತ್ತ ಭದ್ರಾ ನಾಲೆಯಲ್ಲಿ ನೀರಿಲ್ಲದೆ ಕೊಳವೆ ಬಾವಿಯ ಅಂತರ್ಜಲ ಕುಸಿದು ಕೊಳವೆ ಬಾವಿಗಳಲ್ಲಿ ನೀರಿಲ್ಲದಾಗಿ ಕಾರ್ಖಾನೆಯಲ್ಲಿ ಲಭ್ಯವಿದ್ದ ಕಡಿಮೆ ನೀರನ್ನೇ ಮರು ಬಳಕೆ ಮಾಡಿ ಕಾರ್ಖಾನೆಯನ್ನು ನಡೆಸಿರುವ ಪ್ರಯುಕ್ತ ನೀರಿನಲ್ಲಿ ಪಿ.ಹೆಚ್. ಪ್ರಮಾಣವು ಕಡಿಮೆಯಾಗಿರುತ್ತದೆ. ಈ ಸಂಬಂಧ ಪೈಪುಗಳು ಹಾಳಾಗಲು ಕಡಿಮೆ ಪಿ.ಹೆಚ್. ನೀರು ಕಾರಣ ಎಂದು ರಾಜ್ಯ ಸಹಕಾರಿ ಸಕ್ಕರೆ ಕಾರ್ಖಾನೆಗಳ ಮಹಾಮಂಡಳದ ಸಕ್ಕರೆ ತಂತ್ರಜ್ಞರು ವಿವರವಾದ ವರದಿಯನ್ನು ಸಲ್ಲಿಸಿರುತ್ತಾರೆ.

ಸದರಿ ಆರೋಪದಲ್ಲಿ ವಿಚಾರಣಾಧಿಕಾರಿಗಳು ಯಾವುದೇ ವೈಜ್ಞಾನಿಕ ಆಧಾರವಿಲ್ಲದೇ ಪೂರೈಸಿದ ಪೈಪುಗಳು ಕಳಪೆಯಾಗಿರುತ್ತದೆ ಎಂದು ತಿಳಿಸಿರುವುದು ಆಧಾರ ರಹಿತವಾಗಿರುತ್ತದೆ. ಆಡಳಿತ ಮಂಡಳಿಯವರು ಸದರಿ ವಿಷಯದಲ್ಲಿ ವೈಜ್ಞಾನಿಕ ಆಧಾರಗಳ ಮೇಲೆ ಮಹಾಮಂಡಳಿಯ ತಾಂತ್ರಿಕ ತಜ್ಞರ ಅಭಿಪ್ರಾಯದ ಮೇರೆಗೆ ಸಂದರ್ಭಕ್ಕೆ ಅನುಸಾರವಾಗಿ ಕಾರ್ಖಾನೆಯ ಹಿತದೃಷ್ಟಿಯಿಂದ ಸಕಾಲದಲ್ಲಿ ಕ್ರಮ ಜರುಗಿಸಿರುತ್ತದೆ.

ಆದ್ದರಿಂದ ಆಡಳಿತ ಮಂಡಳಿಯು ಅದರ ಕಾರ್ಯ ನಿರ್ವಹಣೆಯಲ್ಲಿ ಯಾವುದೇ ವೈಫಲ್ಯಗೊಂಡಿರುವುದಿಲ್ಲ. ಆದಾಗ್ಯೂ ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ 1959, ಕಲಂ 69,

70 ಮತ್ತು 103ರ ಅಡಿಯಲ್ಲಿ ವಸೂಲಾತಿ ಮಾಡುವ ಬಗ್ಗೆ ಚೀಫ್ ಕೆಮಿಸ್ಟ್ ಡೆಪ್ಯೂಟಿ ಚೀಫ್ ಕೆಮಿಸ್ಟ್ ಹಾಗೂ 4 ಜನ ಮ್ಯಾನುಫ್ಯಾಕ್ಚರಿಂಗ್ ಕೆಮಿಸ್ಟ್‌ಗಳಿಗೆ ದಿನಾಂಕ 5–1–2005 ರಂದು ಸದರಿ ನಷ್ಟದ ಮೊತ್ತವನ್ನು ವಸೂಲಿ ಮಾಡುವ ಬಗ್ಗೆ ನೋಟೀಸ್ ಜಾರಿ ಮಾಡಲಾಗಿದೆ.

ಆಡಳಿತ ಮಂಡಳಿಯ ಚುನಾವಣೆಯನ್ನು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ಚುನಾವಣಾ ರಿಟ್ ಅರ್ಜಿ ಸಂಖ್ಯೆ 36263:2004 ಹಾಗೂ ಕಬ್ಬು ಅಭಿವೃದ್ಧಿ ಆಯುಕ್ತರು ಹಾಗೂ ಸಕ್ಕರೆ ನಿರ್ದೇಶಕರವರ ನಿರ್ದೇಶನದ ಆದೇಶ ಸಂ. ಡಿಎಸ್‌ಕೆ:ಇಎನ್‌ಟಿಎಸ್:142:2003–04 ದಿನಾಂಕ 13–12–2004 ರನ್ವಯ ಚುನಾವಣೆ ನಡೆದು ಹೊಸ ಚುನಾಯಿತ ಆಡಳಿತ ಮಂಡಳಿಯು ದಿನಾಂಕ 23–12–2004 ರಂದು ಅಸ್ತಿತ್ವಕ್ಕೆ ಬರುವುದರಿಂದ, ಹಿಂದಿನ ಆಡಳಿತ ಮಂಡಳಿಯ ವಿರುದ್ಧ ಮಾಡಲಾದ ಈ ಮೇಲಿನ ಆಧಾರ ರಹಿತ ಆರೋಪಗಳು ಅಸ್ತಿತ್ವ ಕಳೆದುಕೊಂಡಿರುತ್ತದೆ.

ಆದ್ದರಿಂದ ಈ ಆಡಳಿತ ಮಂಡಳಿಯ ತೀರ್ಮಾನದ ಮೇರೆಗೆ ಈ ಮೇಲೆ ನೀಡಿರುವ ಎಲ್ಲಾ ಅನುಸರಣಾ ವರದಿಯನ್ನು ದಯಮಾಡಿ ಅಂಗೀಕರಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ವಂದನೆಗಳೊಂದಿಗೆ,

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲಾ) (ಶ್ರೀ ಎಸ್.ಎ. ರವೀಂದ್ರನಾಥ್‌ರವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ದಾವಣಗೆರೆಯ ದೊಡ್ಡಬಾತಿಯಲ್ಲಿ ಇರುವಂಥದ್ದು ಅಲ್ಲಿ 2003ನೇ ಇಸವಿಯಿಂದ ಕಬ್ಬು ಅರೆಯುವುದನ್ನು ನಿಲ್ಲಿಸಿದೆ. ಅಲ್ಲಿ 450 ಜನ ನೌಕರರು ಇದ್ದರು. ಈಗ ಸುಮಾರು 30 ಜನರನ್ನು ಅವರು layoff ನಲ್ಲಿಟ್ಟುಕೊಂಡು ಉಳಿದಂಥ ನೌಕರರನ್ನು ಪೂರ್ಣವಾಗಿ ಮನೆಗೆ ಕಳುಹಿಸಿದ್ದಾರೆ. ಅಲ್ಲಿ ಒಂದು turbine ಹಾಳಾಗಿದೆಯೆಂದು ಹೇಳಿ ಕಬ್ಬು ಅರೆದು ಸಕ್ಕರೆ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಆ ಕಾರ್ಖಾನೆಯಲ್ಲಿ ಸಾಕಷ್ಟು ದೊಡ್ಡ ಪ್ರಮಾಣದ ಅವ್ಯವಹಾರ ನಡೆದಿದೆಯೆಂದು 64 enquiry ಆಗಿ ಅದರ report ಒಂದು 68 enquiry ಬಂದು ಪ್ರಕಾರ ಅಲ್ಲಿಗೆ notice ಸಹ ಕಳುಹಿಸಿದೆ. ಮಾನ್ಯ ಸಚಿವರಿಗೆ ಈ ವಿಷಯ ಕುರಿತು ಗೊತ್ತಿದೆ. ಏಕೆಂದರೆ ಅಲ್ಲಿಯ ಕಾರ್ಮಿಕರು, ಅಲ್ಲಿಯ ರೈತರು ಈ ಎಲ್ಲ ವಿಷಯಗಳನ್ನು ಕಳೆದ ಎರಡು ಮೂರು ವರ್ಷಗಳಿಂದ ನಿರಂತರವಾಗಿ ಸರ್ಕಾರದ ಗಮನಕ್ಕೆ ತರುತ್ತಿದ್ದೇವೆ. ಈಗ ನಾನು 4 ವಿಷಯಗಳ ಬಗ್ಗೆ ಸ್ಪಷ್ಟತೆಯನ್ನು ಕೇಳಬಯಸುತ್ತೇನೆ. ಆ ಆಡಳಿತ ಮಂಡಳಿ ಅವ್ಯವಹಾರ ಮಾಡಿದೆ ಎನ್ನುವಂಥದ್ದು 6A enquiry ಯಲ್ಲಿ ಸಾಬೀತಾಗಿರುವಾಗ ಮತ್ತು ಅದು ಸ್ಪಷ್ಟವಿರುವಾಗ ಅದನ್ನು ಏಕೆ supersede ಮಾಡುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಲಿಲ್ಲ? ಯಾವುದಾದರೂ ಬೇರೆ ಒತ್ತಡಗಳಿದ್ದರೆ ಅದನ್ನು ಬದಿಗೊತ್ತಿ ರೈತರ ಹಿತ ಕಾಪಾಡುವ ದೃಷ್ಟಿಯಿಂದ ಆ ಆಡಳಿತ ಮಂಡಳಿಯನ್ನು supersede ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಯಾವ ಕಾಲಮಿತಿಯೊಳಗೆ ಅದನ್ನು supersede ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ತಿಳಿಸಬೇಕು. ಹಾಗೆಯೇ ರೈತರಿಗೆ 2 ಕೋಟಿ ರೂಪಾಯಿಗಳಷ್ಟು ಕಬ್ಬು ಅರೆದಿದ್ದರ ಬಾಕಿ ಹಣ ಕೊಡಬೇಕು. ಇದಲ್ಲದೆ ಇನ್ನೂ ಸುಮಾರು ಎರಡು ಕೋಟಿ ರೂಪಾಯಿಗಳನ್ನು ಅಲ್ಲಿಯ ನೌಕರರಿಗೆ ಪಗಾರ ಕೊಡಬೇಕು. ಅದಲ್ಲದೆ ಇನ್ನು turbine ರಿಪೇರಿ ಇತ್ಯಾದಿಗಳಿಗೆ ಸುಮಾರು 2 ಕೋಟಿ

ರೂಪಾಯಿಗಳನ್ನು ಕೊಡಬೇಕು. ಹೀಗೆ ಸುಮಾರು 40 ಕೋಟಿ ರೂಪಾಯಿಗಳಷ್ಟು ಲಾಸ್‌ನಲ್ಲಿರುವಂಥ ಈ ಸಕ್ಕರೆ ಕಾರ್ಖಾನೆಯನ್ನು ಪುನರ್‌ಜ್ಜೀವನಗೊಳಿಸುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಅಲ್ಲಿ 400 ನೌಕರರ ಕುಟುಂಬದವರು ಕಳೆದ ಎರಡು ವರ್ಷಗಳಿಂದ ಪಗಾರ ಇಲ್ಲದೆ ಅವರು ಬೀದಿಪಾಲಾಗಿರುವಂಥ ಸ್ಥಿತಿ ಇದೆ. ಇಲ್ಲಿ ಯಾರೋ ಪ್ರಭಾವಿ ರಾಜಕಾರಣಿಗಳು ಈ ಕಾರ್ಖಾನೆಯ ಅಧ್ಯಕ್ಷರಾಗಿರುವುದರಿಂದ ರೈತರಿಗೆ ಬಾಕಿ ಕೊಡಬೇಕಾದ 2 ಕೋಟಿ ರೂಪಾಯಿಗಳನ್ನು ಕೊಡಲಿಲ್ಲ. 400 ಜನ ಅಲ್ಲಿ ಕೆಲಸ ಮಾಡುತ್ತಿರುವಂಥ ನೌಕರರು ಪಗಾರ ಇಲ್ಲದೆ ಬೀದಿಪಾಲಾಗಿದ್ದಾರೆ. ಅವರಿಗೆ ಕೊಡಬೇಕಾಗಿದ್ದಂಥ 3 ತಿಂಗಳ layoff ಪಗಾರ ಸಹ ಕೊಡಲಿಲ್ಲ. ಹೀಗಾಗಿ ಈ ಎರಡು ವಿಷಯಗಳ ಬಗ್ಗೆ ಮೊದಲು ಸ್ಪಷ್ಟೀಕರಣ ಕೊಡಬೇಕು. ಆ ಮೇಲೆ ಉಳಿದ ಎರಡು ವಿಷಯಗಳ ಬಗ್ಗೆ ಸ್ಪಷ್ಟೀಕರಣ ಕೇಳುತ್ತೇನೆ. ಈ ಎರಡು ವಿಷಯಗಳಾದ supersede ಮಾಡುವುದು ಮತ್ತು ರೈತರಿಗೆ, ಸಿಬ್ಬಂದಿಗಳಿಗೆ ಹಾಗೂ ರಿಪೇರಿಗೆ ಬಾಕಿ ಹಣಗಳನ್ನು ಯಾವಾಗ ಕೊಡುತ್ತೀರಿ ಎನ್ನವುದನ್ನು ಮಾನ್ಯ ಸಚಿವರು ಹೇಳಬೇಕೆಂದು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಸದರಿ ಕಾರ್ಖಾನೆಗೆ ಸಂಬಂಧಿಸಿದಂತೆ 64 enquiry ಮಾಡಿದ್ದು ನಿಜ. 7 irregularities ಕಂಡುಬಂದಿದ್ದು, ಆಗ notice ಕೊಟ್ಟನಂತರ ಅವರು ಯಾರ ವಿಚಾರದಲ್ಲಿ complaint ಮಾಡಿದ್ದಾರೆ ಆ 5 ವಿಚಾರದಲ್ಲಿ irregularities ಇತ್ತು ಎಂದು 68 notice ಕೊಡಲಾಯಿತು. ಅದರ ನಂತರ ಅವರು Section 106 of the Co-operation Act ಪ್ರಕಾರ Registrar ರವರಿಗೆ appeal ಹಾಕಿದ್ದಾರೆ. Registrar ರವರು stay ಕೊಟ್ಟಿದ್ದರು. ಹಾಗಾಗಿ ಮುಂದಿನ ಕ್ರಮ ತೆಗೆದುಕೊಳ್ಳಲಿಕ್ಕೆ ಆಗಲಿಲ್ಲ. ಈಗ stay vacate ಆಗಿದೆ. Registrar ಗೂ ಸಹ ಮೆರಿಟ್ ಮೇಲೆ ಕೇಸನ್ನು ಆದಷ್ಟು ಬೇಗನೆ dispose ಮಾಡುವುದಕ್ಕೆ ಹೇಳಿದ್ದೇವೆ. ಹಾಗಾಗಿ ಏನು irregularities ಆಗಿವೆ, ಅದರ ಬಗ್ಗೆ ಯಾರು responsible ಇದ್ದಾರೆ ಅವರ ವಿರುದ್ಧ ಆದಷ್ಟು ಬೇಗನೆ ಕ್ರಮ ತೆಗೆದುಕೊಳ್ಳಲಾಗುವುದು. ಎರಡನೇ ವಿಚಾರಕ್ಕೆ ಹೇಳುವುದಾದರೆ, ಕಾರ್ಮಿಕರು layoff ಮಾಡಿದ್ದು ನಿಜ. Director of Sugar ರವರು layoff ಮಾಡಿದ ನಂತರ ಕಾರ್ಮಿಕ ಇಲಾಖೆ ಮತ್ತು ಸಹಕಾರ ಇಲಾಖೆಗಳ ಮಧ್ಯೆ ಕೆಲವೊಂದು ಭಿನ್ನಾಭಿಪ್ರಾಯ ಬಂತು. Director of Sugar lay off ಮಾಡಿದ್ದು ಸರಿಯೋ ಅಥವಾ ಇದನ್ನು Labour Department ಮಾಡಬೇಕಿತ್ತೆ? ಎನ್ನುವಂಥದ್ದು ಬಂತು. ಆದರೆ Labour Department ನವರು 'ಇಲ್ಲ ನಾವೇ ಮಾಡಬೇಕೆಂದು' ಎಂದು. ಕಾನೂನು ಇಲಾಖೆ ಸಹ Labour Department ನವರು ಮಾಡಬೇಕೆಂದು ಹೇಳಿದರು. ಹಾಗಾಗಿ Labour Department ಗೆ ಮುಂದಿನ ಕ್ರಮ ನೀವು ತೆಗೆದುಕೊಳ್ಳಿ ಎಂದು ನಾವು ತಿಳಿಸಿದೆವು. ಪುನಃ ಹೈಕೋರ್ಟಿನಿಂದ ಹೀಗೆ ಆಗಿದೆ. ಏನೆಂದರೆ, co-operative institutions ಬಗ್ಗೆ ಯಾವುದೇ labour ಸಮಸ್ಯೆ ಬಂದಾಗ ಅದು Co-operation Department ನಿಂದ ಆಗಬೇಕೆಂದು ಅಂತ ಇದು ಇವತ್ತು ಏನಾಗಿದೆಯೆಂದರೆ ಈ ಕಾರ್ಮಿಕ ಯಾವ dispute ಸಹ Director of Sugar ರವರ ಮುಂದೆ pending ನಲ್ಲಿ ಇಲ್ಲ. ಇವರು dispute file ಮಾಡಿದರೆ ಖಂಡಿತವಾಗಿ ನ್ಯಾಯಬದ್ಧವಾಗಿ ಕಾನೂನಿನಂತೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಇನ್ನು supersede ಏಕೆ

ಮಾಡಿಲ್ಲ? Administrator ಅನ್ನು ಏಕೆ ಹಾಕಿಲ್ಲವೆಂದು ಕೇಳಿದ ಬಗ್ಗೆ ಹೇಳುವುದಾದರೆ, ಇಲ್ಲಿ supersede ಮಾಡಲಿಕ್ಕೆ show-cause notice ಕೊಟ್ಟಿದ್ದೇವೆ. ಅದರ ನಂತರ ಈ ಆಡಳಿತ ಮಂಡಳಿಯವರು ಕೋರ್ಟಿಗೆ ಹೋದಾಗ ಕೋರ್ಟಿನಿಂದ ಚುನಾವಣೆ ಮಾಡಿ ಎಂದು ಇನ್ನೊಂದು ಆದೇಶವಾಯಿತು. ಚುನಾವಣೆಯಾಯಿತು. ಚುನಾವಣೆಯಲ್ಲಿ 15 ಜನರು ಆರಿಸಿ ಬಂದರು. ಅದರಲ್ಲಿ 10 ಜನ ಹಳೆಯ ಆಡಳಿತ ಮಂಡಳಿಯವರು ಆರಿಸಿ ಬಂದಿದ್ದಾರೆ, 5 ಜನ ಹೊಸಬರು ಬಂದಿದ್ದಾರೆ. ಹಾಗಾಗಿ ಕಾನೂನು ಇಲಾಖೆಯವರು ಸಹಕಾರ ಇಲಾಖೆಯವರ ಅಭಿಪ್ರಾಯವನ್ನು ಕೇಳಿದ್ದಾರೆ. ಈ show-cause notice ಅನ್ನು supersede ಮಾಡುವುದಕ್ಕೆ ಕೊಟ್ಟಿದ್ದೇವೆ. ಆಡಳಿತ ಮಂಡಳಿಯಲ್ಲಿ ಬದಲಾವಣೆ ಆಗಿದೆ. ಹಾಗಾಗಿ ಹೊಸದಾಗಿ ಕೊಡಬೇಕೋ ಅಥವಾ ಹಳೆಯ ನೋಟೀಸ್ ಮೇಲೆ ನಾವು ಮುಂದುವರಿಸಬೇಕೋ ಎನ್ನುವುದು ಬಂದಿದೆ. ಆದರೆ ಒಂದು ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಲ್ಲಿ ಏನು ದುರ್ವ್ಯವಹಾರ ಆಗಿದೆ ಅದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆ. ಆದಷ್ಟು ಬೇಗನೆ ಪಾರದರ್ಶಕವಾಗಿ, ನ್ಯಾಯಬದ್ಧವಾಗಿ ಕಾನೂನು ಇಲಾಖೆಯ ಸಲಹೆ ತೆಗೆದುಕೊಂಡು ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಂದು ತಮಗೆ ನಾನು ವಿಶ್ವಾಸದಿಂದ ಹೇಳಬಯಸುತ್ತೇನೆ. ಆದರೆ ತಾವು Sugar factory ಯಲ್ಲಿ tools ಎಷ್ಟು ಇವೆ turbine ಬಗ್ಗೆ ಹೇಳಿದಿರಿ ಇದರ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ. ಏಕೆಂದರೆ ಕೇಳಿದಂಥ ಪ್ರಶ್ನೆ ಅದಕ್ಕೆ ಸಂಬಂಧಪಟ್ಟಿದ್ದು ಅಲ್ಲ. ಆದರೆ cane dues ಇದ್ದರೆ, ಅದು naturally ಅದು ನಡೆದಾಗ ಸಕ್ಕರೆ ಕಾರ್ಖಾನೆ ಮುಖಾಂತರ ಕೊಡಬೇಕಾಗುತ್ತದೆ ಹಾಗೇ ಅದರ ಬಗ್ಗೆಯೂ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ತಕ್ಷಣದಲ್ಲಿಯೇ, ಆದಷ್ಟು ಶೀಘ್ರದಲ್ಲಿಯೇ ಕ್ರಮ ತೆಗೆದುಕೊಳ್ಳುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಆದಷ್ಟು ತಕ್ಷಣದಲ್ಲಿ, ಶೀಘ್ರದಲ್ಲಿ ಎಂದು ಹೇಳುವುದರಲ್ಲಿಯೇ ಎಲ್ಲಾ ಸಮಸ್ಯೆ ಇರುವಂಥದ್ದು. ಅದಕ್ಕೆ ಕಾಲಮಿತಿ ಏನು ಎನ್ನುವುದು ನಿಗದಿಯಾಗದೇ ಹೋದರೆ ಅದು supersede ಆಗುವುದಿಲ್ಲ. ಆ ಪ್ರಭಾವಿ ರಾಜಕಾರಣಿಗಳು ತಮ್ಮ ಸ್ಥಾನ ಉಳಿಸಿಕೊಳ್ಳುವುದಕ್ಕೆ ಕಾನೂನಿನ ಯಾವ್ಯಾವ ಅಂಶಗಳು ಇವೆಯೋ ಅದರಡಿಯಲ್ಲಿ ನುಸುಳುವುದಕ್ಕೆ ನೋಡುತ್ತಾರೆ. ಪ್ರಭಾವಿಗಳು ಇರುವುದರಿಂದ ಅದು ಯಾವುದೇ ಇಲಾಖೆ ಇರಲಿ, ಆ ಇಲಾಖೆಯಲ್ಲಿ ಅವರು ತಮಗೆ ಬೇಕಾದಂಥ ವರದಿಯನ್ನು ತರಿಸಿಕೊಂಡು, ಸರ್ಕಾರ ರೈತರಿಗೆ 2 ಕೋಟಿ ಕೊಡಬೇಕೆಂದು ಆಗ ನಾನು ಹೇಳಿದ್ದೆ. ಅದು 2 ಕೋಟಿ ರೂ. ಅಲ್ಲ. ರೈತರಿಗೆ 3 ಕೋಟಿ ರೂಪಾಯಿಗಳು ಬಾಕಿ ಬರಬೇಕು ಮತ್ತು ಕಾರ್ಮಿಕರಿಗೂ ಸಹ 3 ಕೋಟಿ ರೂಪಾಯಿಗಳು ಬಾಕಿಬರಬೇಕು. ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಅಲ್ಲಿ turbine ಹಾಳಾಗಿದೆಯಂತಲೇ ಸಕ್ಕರೆ ಅರೆಯುವುದು ನಿಂತಿದೆ. ಇಲ್ಲಿ 2 ವಿಷಯಗಳು ಬಹಳ ಗಂಭೀರವಾಗಿರುವಂಥದ್ದು. ಅಲ್ಲಿ ಜನ ಮಾತನಾಡಿಕೊಳ್ಳುತ್ತಿರುವುದು, ಪತ್ರಿಕೆಗಳಲ್ಲಿ ಬರುತ್ತಿರುವುದು, ಇವುಗಳಿಗೆ ಎರಡು ಪ್ರಮುಖವಾದ ಕಾರಣ ಇದೆ. ಸರ್ಕಾರ ಏಕೆ ಆ turbine ಅನ್ನು repair ಮಾಡಿಸಿ ಬಾಕಿ ಹಣವನ್ನು ರೈತರಿಗೆ ಏಕೆ ಕೊಡುತ್ತಿಲ್ಲ? ನೌಕರರಿಗೆ ಏಕೆ ಕೊಡುತ್ತಿಲ್ಲವೆಂದರೆ ಪ್ರಭಾವಿ ರಾಜಕಾರಣಿಗಳ ಒತ್ತಡವೆಂದು ಮಾತನಾಡುತ್ತಿದ್ದಾರೆ. ಇದರೊಳಗೆ 2 ಅಂಶಗಳಿವೆ. ಈಗ ಕಬ್ಬನ್ನು ಅಲ್ಲಿರುವಂಥ ಎರಡು ಖಾಸಗಿ ಸಕ್ಕರೆ ಕಾರ್ಖಾನೆಗಳಿಗೆ ತೆಗೆದುಕೊಂಡು ಹೋಗುತ್ತಿದ್ದಾರೆ.

ಇದಕ್ಕೆ ಕೊಡುತ್ತಿಲ್ಲ. ಅದು ಯಾರದ್ದು ಎಂದು ಕೇಳಿದರೆ ಮತ್ತೆ ಅದು ಆ ಸಕ್ಕರೆ ಕಾರ್ಖಾನೆ ಪ್ರಭಾವಿ ರಾಜಕಾರಣಿಗಳದ್ದೇ. ಹಾಗಾಗಿ, ಅವರ ಸಕ್ಕರೆ ಕಾರ್ಖಾನೆಗೆ ಅನುಕೂಲವಾಗಲಿ ಎಂದು ಹೇಳಿ ಈ ಸಕ್ಕರೆ ಕಾರ್ಖಾನೆಯನ್ನು ರಿಪೇರಿ ಮಾಡಿಸುತ್ತಿಲ್ಲ ಅಂತ ಆರೋಪ ಇರುವುದು. ಇನ್ಯಾರಿಗೋ ಸಹಾಯ ಮಾಡಲಿಕ್ಕೆ ಹೋಗಿ ಇದನ್ನು ರಿಪೇರಿಯಾಗದಿರುವ ಸ್ಥಿತಿ ಬರಬಾರದು. ಹಣಕಾಸಿನ ಇಲಾಖೆ ಜೊತೆ ಮಾತನಾಡಿ ಆ ಟರ್ಬೈನ್ ರಿಪೇರಿಗೆ 2 ಕೋಟಿ ರೂಪಾಯಿ ಬಿಡುಗಡೆ ಮಾಡಿಸುವುದಕ್ಕೆ ಪ್ರಯತ್ನವಾಗಬೇಕು.

ಶ್ರೀ ಆರ್.ವಿ. ದೇಶಪಾಂಡೆ : ನಿಮ್ಮ ಪ್ರಶ್ನೆ ಟರ್ಬೈನ್ ಬಗ್ಗೆ ಇಲ್ಲ. ಆದರೆ, ನಾನು ಈ ಸಕ್ಕರೆ ಕಾರ್ಖಾನೆಗಳನ್ನು ರಿವ್ಯೂ ಮಾಡುವಾಗ ನನ್ನ ಗಮನಕ್ಕೆ ಏನು ಬಂದಿತ್ತು, ಅದನ್ನು ನನ್ನ ಮೆಮೊರಿಯಲ್ಲಿ ಹೇಳುತ್ತಿದ್ದೇನೆ, ಈ ಕೈಗಾರಿಕೆಗೆ ಹೊಸ ಟರ್ಬೈನ್ ತೆಗೆದುಕೊಳ್ಳಬೇಕೆಂದು ಹೇಳುತ್ತಾರೆ. ನಾವು, ಅವಶ್ಯಕತೆ ಇಲ್ಲ, ಹಣವೂ ಕೂಡ ಇಲ್ಲ, ಸರ್ಕಾರದಿಂದ ಹಣ ಕೊಡಲಿಕ್ಕಿಲ್ಲ, ಎಂದು ಹೇಳುತ್ತೇನೆ. ಆದರೆ, ನಮ್ಮ ಚಿಕ್ಕೋಡಿ ಷುಗರ್ ಫ್ಯಾಕ್ಟರಿಯಲ್ಲಿ ಹಳೆಯ ಟರ್ಬೈನ್ ಇದೆ. ಅವರು ಅದನ್ನು ಕೊಡಲಿಕ್ಕೆ ರೆಡಿ ಇದ್ದಾರೆ. ಅದು ಕಡಿಮೆ ಬೆಲೆಗೆ ಸಿಗುತ್ತದೆ, ಅದನ್ನು ತೆಗೆದುಕೊಳ್ಳಿ ಎಂದು ಡೈರೆಕ್ಟರ್ ಆಫ್ ಷುಗರ್ ಅವರಿಗೆ ಇನ್‌ಸ್ಟ್ರಕ್ಷನ್ ಕೊಟ್ಟಿದ್ದಾರೆ. ಆ ಕ್ರಮವನ್ನು ತೆಗೆದುಕೊಳ್ಳಲಾಗುವುದು. With regard to the supersession ನಾನು ಇಷ್ಟು ಹೇಳುತ್ತೇನೆ, ನಾನು ಈಗ ಕಾನೂನು ಸಚಿವರ ಜತೆಯಲ್ಲಿ ಮಾತನಾಡಿದ್ದೇನೆ. ಅವರ ಅಭಿಪ್ರಾಯವನ್ನು ಆದಷ್ಟು ಬೇಗ ತೆಗೆದುಕೊಂಡು ಸೆಕ್ಷ್ಟು 15 ದಿನಗಳಲ್ಲಿ we will take action as per law. Law Department ಏನು opinion ಕೊಡುತ್ತಾರೆ, ಆ ಪ್ರಕಾರ .....

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಹಣವನ್ನು ಯಾವಾಗ ಕೊಡುತ್ತೀರಿ? ರೈತರಿಗೆ ಮತ್ತು ಸಿಬ್ಬಂದಿಗೆ 3–3 ಕೋಟಿ ರೂಪಾಯಿ ಕೊಡುವುದು ಬಾಕಿ ಉಳಿದಿದೆ. ಅದನ್ನು ಯಾವಾಗ ಕೊಡುತ್ತೇನೆಂದು ಹೇಳಿದರೆ, ಒಳ್ಳೆಯದು.

ಶ್ರೀ ಆರ್.ವಿ. ದೇಶಪಾಂಡೆ : ಸರ್ಕಾರದ್ದು ಲಯಬಿಲಿಟಿ ಇಲ್ಲ. ಸಕ್ಕರೆ ಕಾರ್ಖಾನೆ ಸಂಬಳ ಕೊಡಬೇಕಾಗಿದೆ. ಸಕ್ಕರೆ ಕಾರ್ಖಾನೆ ಕೇನ್ ಡ್ಯೂಸ್ ಕೊಡಬೇಕಾಗಿದೆ. ರೆಸ್ಪಾನ್ಸಿಬಿಲಿಟಿ ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ, ಸರ್ಕಾರದ ಟ್ರೆಜರಿಯಿಂದ ಕೊಡುವ ಬಗ್ಗೆ ಯಾವುದೂ ಪ್ರಸ್ತಾವನೆ ನಮ್ಮ ಮುಂದಿಲ್ಲ. ಹಾಗಾಗಿ, ಆ ರೈತರಿಗೆ ಕೊಡುವ ಡ್ಯೂಸ್, ಕಾರ್ಮಿಕರಿಗೆ ಕೊಡುವ ಡ್ಯೂಸ್ ಇದರ ಬಗ್ಗೆ ನಾನು ನೇರವಾಗಿ ಇಲ್ಲಿ ಹೇಳಲಿಕ್ಕೆ ಆಗುವುದಿಲ್ಲ. ಏಕೆಂದರೆ, ಪ್ರಶ್ನೆ ಅದರ ಬಗ್ಗೆ ಇದ್ದಿಲ್ಲ. ಮಾಹಿತಿ ಬೇಕಾದರೆ ಕೊಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : 15 ದಿನಗಳಲ್ಲಿ ಸೂಪರ್‌ಸೀಡ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ ಅಂತ ಹೇಳಿದ್ದಾರೆ. ಅದಾಗಬೇಕು.

ಕೃಷಿ ಮಾರಾಟ ಇಲಾಖೆಯಲ್ಲಿ ಬೆರಳಚ್ಚುಗಾರರಿಗೆ ಪದೋನ್ನತಿ

606(6475) : ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿ ಮಾರಾಟ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೆರಳಚ್ಚುಗಾರರು ಮತ್ತು ದ್ವಿತೀಯ ದರ್ಜೆ ಸಹಯಕರುಗಳ ಸಂಖ್ಯೆ ಎಷ್ಟು.